# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶನಿವಾರ, ಮೇ 13, 2023

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ, ಚಿಕ್ಕಮಗಳೂರು, ತುಮಕೂರು, ಗದಗ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ಸಂಪುಟ : 49 ಸಂಚಿಕೆ : 361 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com





# ಮತದಾನದ ಬೆನ್ನಲ್ಲೇ ಜನತೆಗೆ ವಿದ್ಯುತ್ ಬಿಸಿ

- ವಿದ್ಯುತ್ ದರ 70 ಪೈಸೆ ಹೆಚ್ಚಳ, ಏ.1ರಿಂದ ಅನ್ವಯ
- ನಗರ-ಗ್ರಾಮೀಣ ಪ್ರವರ್ಗಗಳ ವಿಲೀನ
- ಪಂಪ್‌ಸೆಟ್‌ಗಳ ಆರ್.ಆರ್. ಸಂಖ್ಯೆಗೆ ಆಧಾರ್ ಜೋಡಣೆ
- ಇ.ವಿ. ಚಾರ್ಜಿಂಗ್ ಘಟಕದ ಶುಲ್ಕ 4.50 ರೂ.ಗೆ ಇಳಿಕೆ



ಬೆಂಗಳೂರು, ಮೇ 12 -ಮತದಾನ ಮುಗಿದ ಬೆನ್ನಲ್ಲೇ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಕೆಇಆರ್‌ಸಿ), ವಿದ್ಯುತ್ ಬಳಕೆಗೆ ವಿಧಿಸುವ ದರವನ್ನು ಯುನಿಟ್‌ಗೆ 70 ಪೈಸೆ ಹೆಚ್ಚಿಸಲು ಒಪ್ಪಿಗೆ ಸೂಚಿಸಿದೆ. ಏಪ್ರಿಲ್ 1ರಿಂದಲೇ ಹೊಸ ದರ ಪೂರ್ವಾನ್ವಯ ವಾಗಲಿದೆ.

ಸಾಮಾನ್ಯವಾಗಿ ಏಪ್ರಿಲ್ 1ರಿಂದ ಅನ್ವಯವಾಗುವಂತೆ ದರ ಹೆಚ್ಚಳವಾಗುತ್ತದೆ. ಚುನಾವಣೆ ಇದ್ದುದರಿಂದ ಕೆಇಆರ್‌ಸಿ ಈ ಪ್ರಕ್ರಿಯೆಯನ್ನು ಮುಂದೂಡಿತ್ತು. ಸರ್ಕಾರದ ಅವಧಿ ಮುಗಿದು, ಹೊಸ ಸರ್ಕಾರ ರಚನೆಯಾಗುವ ಕಾಲದಲ್ಲಿ ದರ ಏರಿಕೆ ಬಿಸಿ ಜನರನ್ನು ತಟ್ಟಲಿದೆ.

ಆದಾಯ ಕೊರತೆ ಎದುರಿಸುತ್ತಿರುವ ಎಸ್ಕಾಂಗಳ ಬೇಡಿಕೆಗೆ ಭಾಗಶಃ ಒಪ್ಪಿಗೆ ನೀಡಿರುವ ಕೆಇಆರ್‌ಸಿ, ಪ್ರತಿ ಯೂನಿಟ್‌ಗೆ ಸರಾಸರಿ 70 ಪೈಸೆ ವಿದ್ಯುತ್ ದರ ಹೆಚ್ಚಿಸಲು ಒಪ್ಪಿಗೆ ನೀಡಿದೆ. ಪ್ರತಿ ಯೂನಿಟ್‌ಗೆ 1.39 ರೂ. ಹೆಚ್ಚಿಸುವಂತೆ (ಶೇ. 16.83) ಎಸ್ಕಾಂಗಳು ಬೇಡಿಕೆ ಸಲ್ಲಿಸಿದ್ದವು. ಆದರೆ, ಶೇ.8.31ರ ಹೆಚ್ಚಳವಾದ 70 ಪೈಸೆಗೆ ಒಪ್ಪಿಗೆ ನೀಡಲಾಗಿದೆ.

ಕಳೆದ ವರ್ಷ ಏಪ್ರಿಲ್‌ನಲ್ಲಿ ಪ್ರತಿ ಯೂನಿಟ್‌ಗೆ ಸರಾಸರಿ 35 ಪೈಸೆಯಷ್ಟು ವಿದ್ಯುತ್ ದರ ಹೆಚ್ಚಿಸಲಾಗಿತ್ತು. ನಂತರ, ಅಕ್ಟೋಬರ್ 1ರಂದು ಇಂಧನ ಹೊಂದಾಣಿಕೆ ಶುಲ್ಕವನ್ನು (ಎಫ್‌ಎಸಿ) ಪರಿಷ್ಕರಿಸಲಾಗಿತ್ತು. ಇದರಿಂದ, ವಿವಿಧ ಎಸ್ಕಾಂಗಳು ಪ್ರತಿ ಯೂನಿಟ್‌ಗೆ 24 ಪೈಸೆಯಿಂದ 43 ಪೈಸೆಯವರೆಗೆ ದರ ಹೆಚ್ಚಿಸಿದ್ದವು. ನಂತರ, (2ನೇ ಪುಟಕ್ಕೆ)

# ಸಿಬಿಎಸ್‌ಇ : 12ನೇ ತರಗತಿ ಶೇ.87.33ರಷ್ಟು ಫಲಿತಾಂಶ

ನವದೆಹಲಿ, ಮೇ 12 - ಸಿ.ಬಿ.ಎಸ್.ಇ. 12ನೇ ತರಗತಿ ಪರೀಕ್ಷಾ ಫಲಿತಾಂಶ ಪ್ರಕಟಿಸಲಾಗಿದ್ದು, ಶೇ.87.33ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಇದು ಕಳೆದ ವರ್ಷಕ್ಕಿಂತ ಶೇ.5.38ರಷ್ಟು ಕಡಿಮೆಯಾಗಿದೆ.

ಅನಾರೋಗ್ಯಕರ ಸ್ಪರ್ಧೆ ತಪ್ಪಿಸುವ ಸಲುವಾಗಿ ಈ ಬಾರಿ ಅರ್ಹತಾ ಪಟ್ಟಿಯನ್ನು ಪ್ರಕಟಿಸಿಲ್ಲ. ಆದರೆ, ವಿವಿಧ ವಿಷಯಗಳಲ್ಲಿ ಅತಿ ಹೆಚ್ಚು ಅಂಕ ಗಳಿಸಿರುವ ಶೇ.0.1ರಷ್ಟು ವಿದ್ಯಾರ್ಥಿಗಳಿಗೆ ಅರ್ಹತಾ ಪ್ರಮಾಣಪತ್ರಗಳನ್ನು ರವಾನಿಸಲಾಗುವುದು ಎಂದು ಸಿ.ಬಿ.ಎಸ್.ಇ. ತಿಳಿಸಿದೆ. (2ನೇ ಪುಟಕ್ಕೆ)

## ಸಿಬಿಎಸ್‌ಇ: 10ನೇ ತರಗತಿ ಶೇ. 93.12 ಫಲಿತಾಂಶ

ನವದೆಹಲಿ, ಮೇ 12 - ಸಿಬಿಎಸ್‌ಇ ಹತ್ತನೇ ತರಗತಿ ಫಲಿತಾಂಶ ಪ್ರಕಟಿಸಲಾಗಿದ್ದು, ಶೇ.93.12ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಇದು ಕಳೆದ ವರ್ಷಕ್ಕೆ ಹೋಲಿಸಿದರೆ ಶೇ.1.28ರ ಇಳಿಕೆಯಾಗಿದೆ.

ಅನಾರೋಗ್ಯಕರ ಸ್ಪರ್ಧೆ ತಪ್ಪಿಸಲು ಈ ಬಾರಿ ಅರ್ಹತಾ ಪಟ್ಟಿ ಪ್ರಕಟಿಸುವುದಿಲ್ಲ. ಅಲ್ಲದೇ, ಪ್ರಥಮ, (2ನೇ ಪುಟಕ್ಕೆ)

# ಹೆಚ್ಚು ಮಕ್ಕಳನ್ನು ಹೊಂದಲು ಸರ್ಕಾರಿ ನೌಕರರರರಿಗೆ ವೇತನ ಹೆಚ್ಚಳ

ಗ್ಯಾಂಗ್‌ಟಾಕ್, ಮೇ 12 - ಹೆಚ್ಚು ಮಕ್ಕಳನ್ನು ಹೊಂದುವ ಸರ್ಕಾರಿ ನೌಕರರಿಗೆ ಮುಂಗಡ ಹಾಗೂ ಹೆಚ್ಚುವರಿ ಇನ್‌ಕ್ರಿಮೆಂಟ್ ನೀಡಲು ಸಿಕ್ಕಿಂ ಸರ್ಕಾರ ನಿರ್ಧರಿಸಿದೆ. ದೇಶೀಯ ಸಮುದಾಯಗಳ ಜನಸಂಖ್ಯೆ ಹೆಚ್ಚಳಕ್ಕೆ ಉತ್ತೇಜನ ನೀಡಲು ಈ ಕ್ರಮ ತೆಗೆದುಕೊಳ್ಳಲಾಗಿದೆ.

ಎರಡು ಮಕ್ಕಳನ್ನು ಹೊಂದಿರುವವರಿಗೆ ಈ ವರ್ಷ ಜನವರಿ 1ರಿಂದ ಜಾರಿಗೆ ಬರುವಂತೆ ಮುಂಗಡವಾಗಿ ಇನ್‌ಕ್ರಿಮೆಂಟ್ ನೀಡಲಾಗುವುದು. ಮೂರು ಮಕ್ಕಳನ್ನು ಹೊಂದಿರುವವರಿಗೆ ಒಂದು ಹೆಚ್ಚುವರಿ ಇನ್‌ಕ್ರಿಮೆಂಟ್ ನೀಡಲಾಗುವುದು. ಈ ಬಗ್ಗೆ (2ನೇ ಪುಟಕ್ಕೆ)


॥ ಶ್ರೀ ಶಿವನಾರದಮುನಿ ಪ್ರಸನ್ನ ॥

## ಮದುವೆಯ ಮಮತೆಯ ಕರೆಯೋಲೆ

ದಾವಣಗೆರೆ ವಾಸಿ
ಶ್ರೀಮತಿ ಬಸಮ್ಮ ಲಿಂ. ಅಣಬೇರು ಶೇಖರಪ್ಪ
ಇವರ ಮಗನಾದ
ಶ್ರೀಮತಿ ಮಧು ಮತ್ತು ಶ್ರೀ ಅಣಬೇರು ಸುರೇಶ

ನಮ್ಮ ಸುಪುತ್ರ
ಚಿ॥ ರಾ॥ ಸುಜಿನ್ ಎ.ಎಸ್. B.E.
ಮತ್ತು
ಚಿ॥ ಕುಂ॥ ಸೌ॥ ಸಂಚಿತಾ ಆರ್.ಎಸ್. B.E.
(ಶ್ರೀಮತಿ ಗೀತಾ ಮತ್ತು ಶ್ರೀ ಆರ್.ಆರ್. ಸುರೇಶ, ಅಜ್ಜಿಹಳ್ಳಿ, ಚನ್ನಗಿರಿ ತಾ॥ ಇವರ ಸುಪುತ್ರಿ)

ಇವರ ವಿವಾಹ ಮಹೋತ್ಸವವನ್ನು ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಸಕುಟುಂಬ ಪರಿವಾರದೊಂದಿಗೆ ಆಗಮಿಸಿ, ವಧು-ವರರಿಗೆ ಆಶೀರ್ವದಿಸಬೇಕೆಂದು ಕೋರುವ.

ದಿನಾಂಕ 13-05-2023ನೇ ಶನಿವಾರ
ನಿಶ್ಚಿತಾರ್ಥ : ಸಂಜೆ 5-30 ರಿಂದ
ಆರತಕ್ಷತೆ : ಸಂಜೆ 7-30 ರಿಂದ

ವಿವಾಹ ಮುಹೂರ್ತ :
ದಿನಾಂಕ 14-05-2023ನೇ ಭಾನುವಾರ
ಬೆಳಿಗ್ಗೆ 8-50 ರಿಂದ 9-45 ರವರೆಗೆ ಸಲ್ಲುವ ಮಿಥುನ ಲಗ್ನದಲ್ಲಿ

ಅಕ್ಷತಾರೋಪಣ : ಬೆಳಿಗ್ಗೆ 12-00 ರಿಂದ

ವಿವಾಹ ಸ್ಥಳ : ಶ್ರೀಮತಿ ಸುಧಾ ವೀರೇಂದ್ರ ಪಾಟೀಲ್ ಸಮುದಾಯ ಭವನ
ಹದಡಿ ರಸ್ತೆ, ಶಿರಮಗೊಂಡನಹಳ್ಳಿ, ದಾವಣಗೆರೆ.

ತಮ್ಮ ಆಗಮನಾಭಿಲಾಷಿಗಳು :
ಶ್ರೀಮತಿ ಮತ್ತು ಶ್ರೀ ಅಣಬೇರು ರಾಜಣ್ಣ ಮತ್ತು ಸಹೋದರರು
ಶ್ರೀಮತಿ ಮಧು ಮತ್ತು ಶ್ರೀ ಅಣಬೇರು ಸುರೇಶ
ಕು. ಡಾ. ಸಿಂಧು ಎ.ಎಸ್. MBBS (MD)
ಶ್ರೀಮತಿ ಪಾರ್ವತಿ, ದಿ॥ ಅಣಬೇರು ನಾಗರಾಜ ಮತ್ತು ಮಕ್ಕಳು
ಶ್ರೀಮತಿ ಗೀತಾ ಮತ್ತು ಶ್ರೀ ಆರ್.ಆರ್. ಸುರೇಶ, ಅಜ್ಜಿಹಳ್ಳಿ
ಮತ್ತು ಬಂಧು-ಮಿತ್ರರು. ಮೊ.: 94489 80202, 99161 11999

ವಿಶೇಷ ಸೂಚನೆ : ಆಹ್ವಾನ ಪತ್ರಿಕೆ ತಲುಪದೇ ಇದ್ದವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಬೇಕಾಗಿ ವಿನಂತಿ.



## ದ್ವಿತೀಯ ವರ್ಷದ ಪುಣ್ಯಸ್ಮರಣೆ



ಶ್ರೀ ನಿಟ್ಟುವಳ್ಳಿ ಬಸವರಾಜಪ್ಪನವರು
ಜನನ : 13.03.1953 - ಮರಣ : 12.05.2021

ನನ್ನ ಪತಿ ಅಮರ... ಪ್ರತಿದಿನ, ಪ್ರತಿಕ್ಷಣ ನಮ್ಮ ಮನೆಯ ನಂದಾದೀಪವಾಗಿ ಬೆಳಗಿದ ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷಗಳಾದವು...ಸದಾ ನಿಮ್ಮ ಸ್ಮರಣೆಯಲ್ಲಿ ಹೆಜ್ಜೆ ಹೆಜ್ಜೆಗೂ ನಿಮ್ಮ ನೆನಪುಗಳ ಸ್ಫೂರ್ತಿಯೊಂದಿಗೆ ಮುನ್ನಡೆಯುತ್ತಿದ್ದೇವೆ. ಜೀವನದ ಎಲ್ಲಾ ಹಂತಗಳಲ್ಲೂ ನಿಮ್ಮ ಅಸ್ತಿತ್ವದ ಅನುಭೂತಿ ನಮಗೆ ದೊರೆಯುತ್ತಿದೆ... ಎಂದೆಂದಿಗೂ ನೀವೇ ನಮಗೆ ದಾರಿದೀಪ... ನಮ್ಮ ಹೃದಯಗಳಲ್ಲಿ ಚಿರಸ್ಥಾಯಿಯಾಗಿ ಶಾಶ್ವತವಾಗಿ ಕಂಗೊಳಿಸುತ್ತಿರುವಿರಿ...

ಇವರ ಆತ್ಮ ಶಾಂತಿಗಾಗಿ
"ಎರಡನೇ ವರ್ಷದ ಪುಣ್ಯಸ್ಮರಣೆ"ಯನ್ನು
ದಿನಾಂಕ :14.05.2023 ಭಾನುವಾರ ಬೆಳಿಗ್ಗೆ 11.00 ಕ್ಕೆ ಶಾಮನೂರು ಗ್ರಾಮದ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ.
ತಾವುಗಳು ಆಗಮಿಸಿ ಅವರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ಸದಾ ನಿಮ್ಮ ಸ್ಮರಣೆಯಲ್ಲಿರುವ...
ಪತ್ನಿ : ಶ್ರೀಮತಿ ಎನ್.ಬಿ. ನಾಗರತ್ನಮ್ಮ, ಮಕ್ಕಳಾದ : ಎನ್.ಬಿ. ಮಂಜುನಾಥ್, ಎನ್.ಬಿ. ಮಧು
ಮೊಮ್ಮಕ್ಕಳು, ಸೊಸೆಯಂದಿರು ಹಾಗೂ ನಿಟುವಳ್ಳಿ ವಂಶಸ್ಥರು,ಬಂಧುಗಳು-ಸ್ನೇಹಿತರು, ಶಾಮನೂರು.
ಸಣ್ಣಗೌಡ್ರು ವಂಶಸ್ಥರು, ಬಿ. ಕಲಪನಹಳ್ಳಿ. ಫೋ. : 88618 90444




## ಮತದಾನದ ಬೆನ್ನಲ್ಲೇ ಜನತೆಗೆ ವಿದ್ಯುತ್ ಬಿಸಿ

**(1ನೇ ಪುಟದಿಂದ)** ಹೊಂದಾಣಿಕೆ ವೆಚ್ಚ ಕಡಿತಗೊಳಿಸಲಾಗಿತ್ತು.

ಆದಾಯ ಕೊರತೆ ಸರಿದೂಗಿಸಲು ಎಲ್ಲ ಎಲ್‌ಟಿ ಮತ್ತು ಹೆಚ್‌ಟಿ ಗ್ರಾಹಕರಿಗೆ ಪ್ರತಿ ಯೂನಿಟ್‌ಗೆ ಸರಾಸರಿ 70 ಪೈಸೆ ದರ ಹೆಚ್ಚಿಸಲು ಒಪ್ಪಿಗೆ ಸೂಚಿಸಲಾಗಿದೆ. ಕಲ್ಲಿದ್ದಲು ವೆಚ್ಚ ಹೆಚ್ಚಳ, ನೌಕರರ ವೇತನ ಹೆಚ್ಚಳ, ಬಂಡವಾಳ ಹೂಡಿಕೆ ಹಾಗೂ ಸವಕಳಿ ಹೆಚ್ಚಳ ಮತ್ತಿತರೆ ಕಾರಣಗಳಿಂದ ವಿದ್ಯುತ್ ದರ ಹೆಚ್ಚಿಸಿರುವುದಾಗಿ ತಿಳಿಸಲಾಗಿದೆ.

ಇ.ವಿ. ಚಾರ್ಜಿಂಗ್ ಸ್ಟೇಷನ್‌ಗಳಿಗೆ ಒದಗಿಸಲಾಗುವ ವಿದ್ಯುತ್ ದರವನ್ನು ಯುನಿಟ್‌ಗೆ 5 ರೂ.ಗಳಿಂದ 4.50 ರೂ.ಗಳಿಗೆ ಇಳಿಕೆ ಮಾಡಲಾಗಿದೆ.

ದರ ರಚನೆ ಸರಳಗೊಳಿಸುವ ಸಲುವಾಗಿ ನಗರ ಮತ್ತು ಗ್ರಾಮೀಣ ಪ್ರವರ್ಗಗಳನ್ನು ವಿಲೀನಗೊಳಿಸಲಾಗುವುದು. ಆದರೆ, ಎಲ್ಲಾ ಗ್ರಾಮೀಣ ಗ್ರಾಹಕರಿಗೆ ಪ್ರತಿ ಯುನಿಟ್‌ಗೆ 30 ಪೈಸೆ ರಿಯಾಯಿತಿ ನೀಡಲಾಗುವುದು.

ದರದ ರಚನೆ ಸರಳಗೊಳಿಸಲು ಗ್ರಾಹಕರ ಪ್ರವರ್ಗ ಸಂಖ್ಯೆಯನ್ನು 31ರಿಂದ 21ಕ್ಕೆ ಇಳಿಸಲಾಗಿದೆ.

ಇದೇ ವೇಳೆ ಕೈಗಾರಿಕೆಗಳಿಗೆ ಸಂಬಂಧಿಸಿದಂತೆ ರಿಯಾಯಿತಿ ಇಂಧನ ದರ ಯೋಜನೆಯಡಿಯ ವಿದ್ಯುತ್ ಬಳಕೆ ಶುಲ್ಕವನ್ನು 6 ರೂ.ಗಳಿಂದ 5 ರೂ.ಗಳಿಗೆ ಇಳಿಸಲಾಗಿದೆ. ಹೆಚ್.ಟಿ. ಗ್ರಾಹಕರಿಗೆ ಅನ್ವಯವಾಗುತ್ತಿದ್ದ ಯೋಜನೆಯನ್ನು 50 ಕಿ.ವ್ಯಾ. ಮತ್ತು ಅದಕ್ಕಿಂತ ಹೆಚ್ಚಿನ ಲೋಡ್ ಮಂಜೂರಾತಿ ಹೊಂದಿರುವ ಎಲ್.ಟಿ. ಕೈಗಾರಿಕೆ ಮತ್ತು ವಾಣಿಜ್ಯ ಸ್ಥಾವರಗಳಿಗೆ ವಿಸ್ತರಿಸಲಾಗಿದೆ.

ಇದೇ ವೇಳೆ, ನೀರಾವರಿ ಪಂಪ್‌ಸೆಟ್‌ಗಳ ಆರ್.ಆರ್. ಸಂಖ್ಯೆಗಳನ್ನು ಸಂಬಂಧಿಸಿದ ಗ್ರಾಹಕರ ಆಧಾರ್ ಸಂಖ್ಯೆಗಳ ಜೊತೆ ಆರು ತಿಂಗಳಲ್ಲಿ ಸಂಪರ್ಕಿಸಬೇಕೆಂದು ಗಡುವು ನೀಡಲಾಗಿದೆ.

## ಸಿಬಿಎಸ್‌ಇ : ಮಾಗನೂರು ಬಸಪ್ಪ ಪಬ್ಲಿಕ್ ಶಾಲೆಗೆ ಶೇ. 100 ಫಲಿತಾಂಶ

ದಾವಣಗೆರೆ, ಮೇ 12- ನಗರದ ಮಾಗನೂರು ಬಸಪ್ಪ ಪಬ್ಲಿಕ್ ಸ್ಕೂಲ್‌ಗೆ 2022-23 ನೇ ಸಾಲಿನ 10 ನೇ ತರಗತಿ ಸಿಬಿಎಸ್‌ಇ ಪರೀಕ್ಷೆಯಲ್ಲಿ ಶೇ. 100 ಫಲಿತಾಂಶ ಬಂದಿದೆ.

ಪರೀಕ್ಷೆಗೆ ಹಾಜರಾಗಿದ್ದ 54 ವಿದ್ಯಾರ್ಥಿಗಳ ಪೈಕಿ ಎ1- 4, ಎ2- 10, ಬಿ1- 18, ಬಿ2- 11 ವಿದ್ಯಾರ್ಥಿಗಳು ಉತ್ತೀರ್ಣರಾಗಿ ಶಾಲೆಗೆ ಕೀರ್ತಿ ತಂದಿದ್ದಾರೆ.

# ಅನುಮಾನ ದೂರವಿಟ್ಟು, ಜೀವನ ಸಾಗಿಸಿ

### ಹರಪನಹಳ್ಳಿ: ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ವರಸದ್ಯೋಜಾತ ಶ್ರೀಗಳು



ಹರಪನಹಳ್ಳಿ, ಮೇ 12- ವಿವಾಹಗಳು ಬದುಕಿನ ಬುನಾದಿಗಳಾಗಿದ್ದು, ನವ ವಧು-ವರರು ಹೊಸ ಜೀವನಕ್ಕೆ ಕಾಲಿಟ್ಟಿದ್ದೀರಿ. ನೀವುಗಳು ಬದುಕಿನಲ್ಲಿ ನಂಬಿಕೆ, ವಿಶ್ವಾಸವಿಟ್ಟು, ಅನುಮಾನ ದೂರವಿಟ್ಟು ಜೀವನ ಸಾಗಿಸಿ ಎಂದು ತೆಗ್ಗಿನಮಠ ಸಂಸ್ಥಾನದ ಪೀಠಾಧ್ಯಕ್ಷರಾದ ಶ್ರೀ ವರಸದ್ಯೋಜಾತ ಶಿವಾಚಾರ್ಯ ಮಹಾಸ್ವಾಮೀಜಿ ಹೇಳಿದರು.

ಪಟ್ಟಣದ ತೆಗ್ಗಿನಮಠ ಸಂಸ್ಥಾನದ ಆವರಣದಲ್ಲಿ ಶ್ರೀ ತೆಗ್ಗಿನಮಠ ಗ್ರಾಮೀಣ ವಿಕಾಸ ಟ್ರಸ್ಟ್ ಹಾಗೂ ಶ್ರೀ ತೆಗ್ಗಿನಮಠ ಪುರಾಣ ಪ್ರವಚನ ಮತ್ತು ಸಾಮೂಹಿಕ ವಿವಾಹ ಸಮಿತಿಗಳ ಆಶ್ರಯದಲ್ಲಿ ಲಿಂ. ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳ 76ನೇ ಪುಣ್ಯಾರಾಧನೆ, ಧರ್ಮಾರ್ಥ ಸಾಮೂಹಿಕ ಕಲ್ಯಾಣ ಮಹೋತ್ಸವ, ಮಾಂಗಲ್ಯ ಧಾರಣ, ಅಕ್ಷತಾರೋಪಣ ಮತ್ತು ಧರ್ಮಸಭೆಯ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಭಾರತೀಯ ಸಂಸ್ಕೃತಿ ಉಳಿದಿರುವುದು ಆದರ್ಶ ದಂಪತಿಗಳಿಂದ, ಕಷ್ಟ-ಸುಖಗಳನ್ನು ಹಾಲು-ಜೇನಿನಂತೆ ಬೆರಸಿ ಸುಮಧುರ ಬಾಳು ಸಾಗಿಸುವುದರಲ್ಲಿ ಅಡಗಿರುವುದನ್ನು ವಿಶ್ವಕ್ಕೆ ಪಸರಿಸಿದ್ದಾರೆ ಎಂದರು.

ಭಾರತ ಕೃಷಿ ಪ್ರಧಾನ ದೇಶವಾಗಿದೆ. ಆದರೆ ಇಲ್ಲಿನ ರೈತ ಮಕ್ಕಳಿಗೆ ಹೆಣ್ಣು ಕೊಡಲು ಇಂದುಮುಂದು ನೋಡುವ ಪರಿಪಾಟಲು ಬೆಳೆಯುತ್ತಿದೆ. ಸಮಾಜ ಬದಲಾವಣೆ ಬಯಸುತ್ತಿದೆ. ಆದ್ದರಿಂದ ಮಾದರಿ ರೈತರಾಗಿ ನೂತನ ತಂತ್ರಜ್ಞಾನಗಳ ಅಳವಡಿಕೆ ಮಾಡಿಕೊಂಡು ಆರ್ಥಿಕ ಸಬಲರಾಗಿ, ಹೆಣ್ಣು ಕೊಡುವವರು ಹುಡುಕಿಕೊಂಡು ಬರುತ್ತಾರೆ ಎಂದು ಕಿವಿಮಾತು ಹೇಳಿದರು.

ತೆಗ್ಗಿನಮಠ ರಾಜ್ಯದ 8 ಜಿಲ್ಲೆಗಳಲ್ಲಿ ಶಿಕ್ಷಣ ಹಾಗೂ ಧಾರ್ಮಿಕ ಕ್ಷೇತ್ರಗಳಲ್ಲಿ ಕಳೆದ 53 ವರ್ಷಗಳಿಂದ ತನ್ನದೇ ಆದ ಛಾಪನ್ನು ಮೂಡಿಸಿದೆ. ಸಮಾಜದಲ್ಲಿ ಒಂದೇ ವರ್ಗದವರಿಲ್ಲ ಅದನ್ನು ಅರಿತು ತೆಗ್ಗಿನಮಠ ಎಲ್ಲಾ ವರ್ಗಗಳನ್ನು ಸಮಾನವಾಗಿ ಪರಿಗಣಿಸಿ ಎಲ್ಲಾ ಜಾತಿ, ಸಮುದಾಯಗಳಿಗೆ ಸಾಮೂಹಿಕ ವಿವಾಹವನ್ನು ಹಮ್ಮಿಕೊಂಡಿದೆ. ಇಂದಿನ ಒಂದು ಮದುವೆ ಖರ್ಚು ಸರಿಸುಮಾರು 3 ರಿಂದ 4 ಲಕ್ಷ ಮೀರುತ್ತಿದೆ. ಇದನ್ನು ಸಾಮೂಹಿಕ ವಿವಾಹಗಳು ತಡೆಗಟ್ಟಿ ಆರ್ಥಿಕ ಹೊರೆಯನ್ನು ತಗ್ಗಿಸಲು ಶ್ರಮಿಸಿದೆ. ದಂಪತಿಗಳು ಅತ್ತೆ-ಮಾವನವರನ್ನು ತಮ್ಮ ಕುಟುಂಬದ ಸದಸ್ಯರೆಂದು ಪರಿಗಣಿಸಿದರೆ ವೃದ್ಧಾಶ್ರಮಗಳ ಅವಶಕತೆಯಿಲ್ಲ ಎಂದರು.


ತೆಗ್ಗಿನ ಮಠ ಸಂಸ್ಥಾನದ ಆಡಳಿತಾಧಿಕಾರಿ ಟಿ.ಎಂ. ಚಂದ್ರಶೇಖರಯ್ಯ ಮಾತನಾಡಿ, ಪ್ರತಿ ವರ್ಷವೂ ಕೂಡ ಸಾಮೂಹಿಕ ವಿವಾಹಗಳನ್ನು ಮಾಡುವ ಮೂಲಕ ದುಂದು ವೆಚ್ಚಕ್ಕೆ ಕಡಿವಾಣ ಹಾಕುವ ಕೆಲಸವನ್ನು ತೆಗ್ಗಿನ ಮಠ ಮಾಡುತ್ತಾ ಬಂದಿದೆ. ತೆಗ್ಗಿನಮಠ ಸಂಸ್ಥಾನ ಹರಪನಹಳ್ಳಿಯ ಕೀರ್ತಿಯನ್ನು ರಾಷ್ಟ್ರಾದ್ಯಂತ ಹರಡಿದೆ. ಶಿಕ್ಷಣ ಹಾಗೂ ದಾರ್ಮಿಕ ಕೆಲಸಗಳೊಂದಿಗೆ ಸಮಾಜ ಮುಖಿ ಕೆಲಸಗಳನ್ನೂ ಮಾಡಿಕೊಂಡು ಸಾಗುತ್ತಿದೆ. ಮುಂದೆಯೂ ಸಹ ಅನೇಕ ಕಾರ್ಯಕ್ರಮಗಳನ್ನು ಮಾಡುವತ್ತ ಶ್ರೀಮಠದ ಗುರಿ ಇದೆ ಎಂದರು.

ಬಳ್ಳಾರಿ ವೀರಶೈವ ಸಮಾಜದ ಮುಖಂಡ ಎಂ.ಸಿದ್ರಾಮಗೌಡ್ರು ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಧರ್ಮಸಭೆಯಲ್ಲಿ ಕೆ.ಎಂ.ಚನ್ನಬಸಯ್ಯ ವರ್ತಕರು, ವಿ.ಮಂಜುನಾಥ ಪ್ರಥಮ ಗುತ್ತಿಗೆದಾರರು, ಡಾ. ಪಿ.ಅನಂತಶೆಟ್ಟಿ ಹಾಗೂ ಗಣೇಶ ಪಾಟೀಲ್, ವಿಕಾಸ್ ಸೈಂಟಿಫಿಕ್ ಸಪ್ಲೈಸ್ ಅವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಟಿ.ಎಂ.ಶಿವಶಂಕರ್, ಪೂಜಾರ್ ಚಂದ್ರಶೇಖರ್, ಬಿಇಡಿ ಕಾಲೇಜು ಪ್ರಾಚಾರ್ಯ ಟಿ.ಎಂ.ರಾಜಶೇಖರ, ಫಾರ್ಮಸಿ ಕಾಲೇಜು ಪ್ರಾಚಾರ್ಯ ನಾಗೇಂದ್ರರಾವ್, ಭಂಗಿ ಬಸಪ್ಪ ಪಿಯು ಕಾಲೇಜು ಪ್ರಾಚಾರ್ಯ ಅರುಣಕುಮಾರ್, ಉಪಪ್ರಾಚಾರ್ಯ ಇಟಿಗಿ ಷಣ್ಮುಖ, ಮುಖಂಡರುಗಳಾದ ವೀರನಗೌಡ್ರು, ಶಾಂತಾ ಆನಂದ್, ಎಂ.ಪಿ.ಎಂ. ಶಾಂತವೀರಯ್ಯ, ಸಿ.ಎಂ.ಕೊಟ್ರಯ್ಯ ಸೇರಿದಂತೆ ಇತರರು ಇದ್ದರು.

## ಚುಟುಕು ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಸಾಣೇಹಳ್ಳಿ ಶ್ರೀ



ಸಾಣೇಹಳ್ಳಿ, ಮೇ 12- ಕರ್ನಾಟಕ ಚುಟುಕು ಸಾಹಿತ್ಯ ಸಮ್ಮೇಳನದ 11ನೇ ಸರ್ವಾಧ್ಯಕ್ಷರಾಗಿ ಸಾಣೇಹಳ್ಳಿ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಅವರನ್ನು ಆಯ್ಕೆ ಮಾಡಲಾಗಿದೆ

ಭಾಲ್ಕಿ ಹಿರೇಮಠದ ಜಗದ್ಗುರು ಡಾ. ಬಸವಲಿಂಗ ಪಟ್ಟದ್ದೇವರು ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು.

ಚುಟುಕು ಸಾಹಿತ್ಯ ಪರಿಷತ್ತಿಗೆ ದಶಮಾನೋತ್ಸವದ ಸಂಭ್ರಮ. ಈ ಬಾರಿಯ 11ನೇಯ ಸಮ್ಮೇಳನ ಮೇ 25ಕ್ಕೆ ಭಾಲ್ಕಿ ಹಿರೇಮಠದ ಸಂಸ್ಥಾನದ ಅಡಿಯಲ್ಲಿ ಜರುಗಲಿದೆ. 'ಶಿವಸಂಚಾರ' ಮೂಲಕ ಶರಣ ಸಾಹಿತ್ಯವನ್ನು ವಿಶ್ವಮಟ್ಟದಲ್ಲಿ ಛಾಪು ಮೂಡಿಸಿದ ಡಾ. ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳವರ ಆಯ್ಕೆ ಬಹಳ ಸಂತೋಷ ತಂದಿದೆ. ಪೂಜ್ಯರು ಆಧುನಿಕ ವಚನಕಾರರೂ ಹೌದು. ಸಾಮಾಜಿಕ ಜಾಲತಾಣಗಳ ಮೂಲಕ ನಿತ್ಯವೂ ಬರುತ್ತಿರುವ 'ಒಲಿದಂತೆ ಹಾಡುವೆ' ಚುಟುಕು ಸಾಹಿತ್ಯ ಮನೆಮಾತಾಗಿದೆ. ತರಳಬಾಳು ಶಾಖಾಮಠದ ಜವಾಬ್ದಾರಿ ಹೊತ್ತುಕೊಂಡು ಜನಪರ ನಿಸ್ವಾರ್ಥ ಸೇವಾ ಕೈಂಕರ್ಯಗಳು ಅಹರ್ನಿಶಿ ಮಾಡುತ್ತಿದ್ದಾರೆ ಎಂದು ಅವರು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಶ್ರೀ ಗುರುಬಸವ ಪಟ್ಟದೇವರು, ಶ್ರೀ ಮಹಾಲಿಂಗ ಶ್ರೀಗಳು, ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಶಂಭುಲಿಂಗ ಕಾಮಣ್ಣ, ಜ್ಞಾನ ವಿಜ್ಞಾನ ಸಮಿತಿ ಅಧ್ಯಕ್ಷ ರಾಜಶೇಖರ ಮಠಪತಿ, ಕಚುಸಾಪ ಬಸವಕಲ್ಯಾಣ ತಾಲೂಕು ಅಧ್ಯಕ್ಷ ವಿಶ್ವನಾಥ ಮುಕ್ತಾ, ಕಮಲನಗರ ತಾಲೂಕು ಅಧ್ಯಕ್ಷ ಸಂಗಮೇಶ ಮುರ್ಕೆ ಮತ್ತಿತರರು ಹಾಜರಿದ್ದರು.

## ಅದಾನಿ ಷೇರುಗಳ ತನಿಖೆಗೆ ಮೂರು ತಿಂಗಳ ಅವಕಾಶ

ನವದೆಹಲಿ, ಮೇ 12 - ಅದಾನಿ ಸಮೂಹದ ಷೇರುಗಳ ಬೆಲೆಯನ್ನು ತಿರುಚಿದ ಹಾಗೂ ನಿಯಂತ್ರಕರಿಗೆ ಮಾಹಿತಿ ನೀಡುವಲ್ಲಿ ಲೋಪವಾದ ಆರೋಪಗಳ ತನಿಖೆ ನಡೆಸಲು ಮಾರುಕಟ್ಟೆ ನಿಯಂತ್ರಕ ಸೆಬಿಗೆ ಇನ್ನೂ ಮೂರು ತಿಂಗಳ ಕಾಲಾವಕಾಶ ನೀಡುವುದಾಗಿ ಸುಪ್ರೀಂ ಕೋರ್ಟ್ ಇಂಗಿತ ವ್ಯಕ್ತಪಡಿಸಿದೆ. ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರ ನೇತೃತ್ವದ ತ್ರಿಸದಸ್ಯ ಪೀಠ ಈ ಬಗ್ಗೆ ಮೇ 15ರಂದು ವಿಚಾರಣೆ ನಡೆಸಲಿದ್ದು, ಆಗ ಹೆಚ್ಚುವರಿ ಸಮಯ ನೀಡುವ ಸಾಧ್ಯತೆ ಇದೆ.

## ಸಿಬಿಎಸ್‌ಇ: 12ನೇ ತರಗತಿ ಶೇ.87.33ರಷ್ಟು ಫಲಿತಾಂಶ

**(1ನೇ ಪುಟದಿಂದ)** ಕಳೆದ ವರ್ಷ ಶೇ.92.71ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದರು. ಕೊರೊ ನಾಗೆ ಮುಂಚಿನ 2019ರಲ್ಲಿ ಶೇ.83.40ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದರು.

ತಿರುವನಂತಪುರಂ ವಲಯದಲ್ಲಿ ಅತಿ ಹೆಚ್ಚಿನ ಶೇ.99.91ರಷ್ಟು ಫಲಿತಾಂಶ ದೊರೆತಿದೆ. ಪ್ರಯಾಗ್‌ರಾಜ್‌ನಲ್ಲಿ ಅತಿ ಕಡಿಮೆ ಶೇ.78.05 ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.

### 10ನೇ ತರಗತಿ ಶೇ. 93.12 ಫಲಿತಾಂಶ

**(1ನೇ ಪುಟದಿಂದ)** ದ್ವಿತೀಯ ಹಾಗೂ ತೃತೀಯ ದರ್ಜೆ ಎಂದೂ ವಿಭಜಿಸುವುದಿಲ್ಲ ಎಂದು ಪರೀಕ್ಷಾ ಮಂಡಳಿ ಹೇಳಿದೆ. ವಿದ್ಯಾರ್ಥಿನಿಯರಲ್ಲಿ ಉತ್ತೀರ್ಣತೆಯ ಪ್ರಮಾಣ ಶೇ.94.25 ಹಾಗೂ ವಿದ್ಯಾರ್ಥಿಗಳಲ್ಲಿ ಶೇ.92.27ರಷ್ಟಿದೆ. ಕಳೆದ ವರ್ಷ ಶೇ.94.40ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದರು.

### 3 ಲಕ್ಷ ವಿದ್ಯಾರ್ಥಿಗಳಿಗೆ ಶೇ.90ಕ್ಕಿಂತ ಹೆಚ್ಚು ಅಂಕ

ನವದೆಹಲಿ, ಮೇ 12 - ಸಿ.ಬಿ.ಎಸ್.ಇ. ನಡೆಸುವ 10 ಹಾಗೂ 12ನೇ ತರಗತಿ ಪರೀಕ್ಷೆಗಳಲ್ಲಿ 3.08 ಲಕ್ಷ ವಿದ್ಯಾರ್ಥಿಗಳು ಶೇ.90ಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸಿದ್ದಾರೆ. 66 ಸಾವಿರ ವಿದ್ಯಾರ್ಥಿಗಳು ಶೇ.95ಕ್ಕಿಂತ ಹೆಚ್ಚು ಅಂಕ ಪಡೆದಿದ್ದಾರೆ.

ಮಂಡಳಿಯು ಈ ಬಾರಿ ಮೆರಿಟ್ ಪಟ್ಟಿ ಹಾಗೂ ವಿಭಾಗಗಳನ್ನು ಪ್ರಕಟಿಸಿಲ್ಲ. ವಿದ್ಯಾರ್ಥಿಗಳ ನಡುವೆ ಅನಾರೋಗ್ಯಕರ ಸ್ಪರ್ಧೆ ನಡೆಯುವುದನ್ನು ತಪ್ಪಿಸಲು ಈ ಕ್ರಮ ತೆಗೆದುಕೊಳ್ಳಲಾಗಿದೆ.

12ನೇ ತರಗತಿಯಲ್ಲಿ 1.12 ಲಕ್ಷ ವಿದ್ಯಾರ್ಥಿಗಳು ಶೇ.90ಕ್ಕಿಂತ ಹೆಚ್ಚು ಹಾಗೂ 22,622 ವಿದ್ಯಾರ್ಥಿಗಳು ಶೇ.95ಕ್ಕಿಂತ ಹೆಚ್ಚು ಅಂಕ ಪಡೆದಿದ್ದಾರೆ. 10ನೇ ತರಗತಿಯಲ್ಲಿ 1.95 ಲಕ್ಷ ವಿದ್ಯಾರ್ಥಿಗಳು ಶೇ.90 ಹಾಗೂ 44,297 ವಿದ್ಯಾರ್ಥಿಗಳು ಶೇ.95ಕ್ಕಿಂತ ಹೆಚ್ಚು ಅಂಕ ಗಳಿಸಿದ್ದಾರೆ.

## ಹೆಚ್ಚು ಮಕ್ಕಳನ್ನು ಹೊಂದಲು ನೌಕರರರಿಗೆ ವೇತನ ಹೆಚ್ಚಳ

**(1ನೇ ಪುಟದಿಂದ)** ಮೇ 10ರಂದು ಆದೇಶ ಹೊರಡಿಸಲಾಗಿದೆ.

ಜನವರಿ 1, 2023ರ ನಂತರ ಎರಡನೇ ಹಾಗೂ ಮೂರನೇ ಮಕ್ಕಳನ್ನು ಪಡೆಯುವವರು ಮಾತ್ರ ಈ ಯೋಜನೆಗೆ ಅರ್ಹರಾಗಿದ್ದಾರೆ. ದತ್ತು ಪಡೆದ ಸಂದರ್ಭದಲ್ಲಿ ಈ ಸೌಲಭ್ಯ ಸಿಗುವುದಿಲ್ಲ.

ಸಿಕ್ಕಿಂನ ಸ್ಥಳೀಯರಲ್ಲಿ ಜನನ ಪ್ರಮಾಣ ಗಣನೀಯವಾಗಿ ತಗ್ಗಿದೆ. ಈ ಹಿನ್ನೆಲೆಯಲ್ಲಿ ಹೆಚ್ಚು ಮಕ್ಕಳನ್ನು ಹೊಂದಲು ಉತ್ತೇಜನ ನೀಡಲಾಗುವುದು ಎಂದು ಸಿಕ್ಕಿಂ ಮುಖ್ಯಮಂತ್ರಿ ಪ್ರೇಮ್ ಸಿಂಗ್ ತಮಂಗ್ ತಿಳಿಸಿದ್ದರು.

ಸ್ಥಳೀಯ ಜನ ಸಮೂಹದಲ್ಲಿ ಮಕ್ಕಳ ಜನನ ಕಡಿಮೆಯಾಗಿರುವುದು ಗಂಭೀರ ವಿಷಯ. ಈ ಪರಿಸ್ಥಿತಿ ಬದಲಿಸಲು ಎಲ್ಲ ಕ್ರಮಗಳನ್ನು ತೆಗೆದುಕೊಳ್ಳಬೇಕಿದೆ ಎಂದು ತಮಂಗ್ ಈ ಹಿಂದೆ ಹೇಳಿದ್ದರು.

ಸಿಕ್ಕಿಂ ಭಾರತದಲ್ಲೇ ಅತಿ ಕಡಿಮೆ ಜನಸಂಖ್ಯೆ ಹೊಂದಿರುವ ರಾಜ್ಯವಾಗಿದೆ. ಇಲ್ಲಿನ ಜನಸಂಖ್ಯೆ ಏಳು ಲಕ್ಷದಷ್ಟಿದೆ. ರಾಜ್ಯದ ಫಲವತ್ತತೆ ದರ 1.1ರಷ್ಟಿದೆ. ಇದೂ ಸಹ ದೇಶದಲ್ಲೇ ಅತಿ ಕಡಿಮೆಯಾಗಿದೆ.

ಲೆಪ್ಚ, ಭಾಟಿಯ ಹಾಗೂ ನೇಪಾಳಿ ಸಮುದಾಯಗಳಲ್ಲಿ ಜನಸಂಖ್ಯೆ ನಿರಂತರವಾಗಿ ಕಡಿಮೆಯಾಗುತ್ತಿರುವ ಬಗ್ಗೆ ಮುಖ್ಯಮಂತ್ರಿ ಕಳವಳ ವ್ಯಕ್ತಪಡಿಸಿದ್ದರು. ಸ್ಥಳೀಯರ ಜನಸಂಖ್ಯೆ ಹೆಚ್ಚಿಸಲು ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುವುದಾಗಿ ತಿಳಿಸಿದ್ದರು.

## ಬಿ.ಪಿ. ಹರೀಶ್ ಜನ್ಮದಿನ : ಹರಿಹರದಲ್ಲಿ ವಿಶೇಷ ಪೂಜೆ



ಹರಿಹರ, ಮೇ 12 - ನಗರದ ವಿವಿಧ ದೇವಸ್ಥಾನಗಳಲ್ಲಿ ವಿಧಾನಸಭಾ ಚುನಾವಣೆಯ ಬಿಜೆಪಿ ಅಭ್ಯರ್ಥಿ, ಮಾಜಿ ಶಾಸಕ ಬಿ.ಪಿ.ಹರೀಶ್ ಅವರ ಹುಟ್ಟುಹಬ್ಬದ ಅಂಗವಾಗಿ ಬಿಜೆಪಿಯಿಂದ ಶ್ರೀ ಹರಿಹರೇಶ್ವರ ದೇವಸ್ಥಾನ, ಮಾಜೇನಹಳ್ಳಿ ಗ್ರಾಮದೇವತೆ ದೇವಸ್ಥಾನ, ಪ್ರಶಾಂತ ನಗರದ ಗಣಪತಿ ದೇವಸ್ಥಾನ, ಹಳ್ಳದಕೇರಿಯಲ್ಲಿನ ಏಕನಾಥೇಶ್ವರಿ ದೇವಸ್ಥಾನ, ಗುತ್ತೂರಿನ ಚೌಡೇಶ್ವರಿ ದೇವಸ್ಥಾನ, ಮಲೆಬೆನ್ನೂರು ಹೋಬಳಿ ಕೊಮಾರನಹಳ್ಳಿಯ ಶ್ರೀ ರಂಗನಾಥಸ್ವಾಮಿ ದೇವಸ್ಥಾನ ಸೇರಿದಂತೆ ತಾಲ್ಲೂಕಿನ ಇತರ ಅನೇಕ ಕಡೆ ವಿಶೇಷ ಪೂಜೆ ನೆರವೇರಿಸಲಾಯಿತು.

ಜೊತೆಗೆ ನಗರದ ಸಾರ್ವಜನಿಕ ಆಸ್ಪತ್ರೆಯಲ್ಲಿನ ರೋಗಿಗಳಿಗೆ ಹಣ್ಣು, ಹಾಲು ವಿತರಿಸಲಾಯಿತು.

ಈ ಸಂದರ್ಭದಲ್ಲಿ ಬಿಜೆಪಿ ನಗರ ಘಟಕ ಅಧ್ಯಕ್ಷ ಅಜಿತ್ ಸಾವಂತ್, ದೂಡ ಸದಸ್ಯ ಬಾತಿ ಚಂದ್ರಶೇಖರ್, ದೂಡ ಮಾಜಿ ಸದಸ್ಯ ರಾಜು ರೋಖಡೆ, ನಗರಸಭೆ ಸದಸ್ಯ ಎ.ಕೆ.ಹನುಮಂತಪ್ಪ, ಮಾಲ ತೇಶ್ ಭಂಡಾರಿ, ಪ್ರಧಾನ ಕಾರ್ಯದರ್ಶಿಗಳಾದ ತುಳಜಪ್ಪ ಭೂತೆ, ಮಂಜನಾಯ್ಕ ಹೆಚ್. ಮತ್ತಿತರರು ಉಪಸ್ಥಿತರಿದ್ದರು.

### ಮೊಣಕಾಲು ಪಟ್ಟಿ ಶಿಬಿರ

ಶಿವಮೊಗ್ಗ, ಮೇ 12- ಶ್ರೀ ಕಲಾ ಇಂಟರ್ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಫ್ಯಾಷನ್ ಟೆಕ್ನಾಲಜಿ, ಶಿವಮೊಗ್ಗ ಜಿಲ್ಲಾ ನಿವೃತ್ತ ನೌಕರರ ಸಂಘ ಮತ್ತು ಪಿ. ಎನ್.ಆರ್.ಸೊಸೈಟಿ ಭಾವನಗರ್ ಗುಜರಾತ್ ಇವರುಗಳ ಸಂಯುಕ್ತ ಆಶ್ರಯದಲ್ಲಿ ಜೂನ್ 11 ರ ಭಾನುವಾರ ಮೊಣಕಾಲು ಪಟ್ಟಿ ಶಿಬಿರವು ಜಿಲ್ಲಾ ನಿವೃತ್ತ ನೌಕರರ ಸಂಘದ ಆವರಣದಲ್ಲಿ ನಡೆಯಲಿದೆ. ಎಲುಬು ಹಾಗು ಕೀಲು ತಜ್ಞ ಡಾ. ವಿಜಯನಾಯಕ್ ಶಸ್ತ್ರಚಿಕಿತ್ಸೆ ಹಾಗು ಔಷಧರಹಿತ ಮಂಡಿನೋವು ನಿವಾರಣೆಗೆ ಸಲಹೆ ನೀಡಿ ಅಗತ್ಯವಿರುವವರಿಗೆ ಮೊಣಕಾಲು ಪಟ್ಟಿ ಅಳವಡಿಸಿಕೊಳ್ಳಲು ಮಾರ್ಗದರ್ಶನ ಮಾಡುವರು. ವಿವರಗಳಿಗೆ ಸಂಪರ್ಕಿಸಿ: ಪ್ರೊ. ಟಿ.ಎಸ್. ರಾಮಕುಮಾರ್ (9448025056) ಕೇಶವಮೂರ್ತಿ (8618907250), ಅನ್ನಪೂರ್ಣ (9448127813). ಆರ್.ಟಿ. ನಟರಾಜ್ (9448143165).

## ಜ್ಞಾನವಾಪಿ ಮಸೀದಿಯ ಶಿವಲಿಂಗದ ವೈಜ್ಞಾನಿಕ ತನಿಖೆಗೆ ಆದೇಶ

ಪ್ರಯಾಗ್‌ರಾಜ್, ಮೇ 12 – ವಾರಣಾಸಿಯ ಜ್ಞಾನವಾಪಿ ಮಸೀದಿಯಲ್ಲಿ ಇದೆ ಎಂದು ಹೇಳಲಾದ ಶಿವಲಿಂಗದ ವಿನ್ಯಾಸವನ್ನು ವೈಜ್ಞಾನಿಕ ತನಿಖೆಗೆ ಒಳಪಡಿಸಲು ಉತ್ತರ ಪ್ರದೇಶದ ಅಲಹಾಬಾದ್ ಹೈಕೋರ್ಟ್ ಆದೇಶಿಸಿದೆ.

ವಾರಣಾಸಿಯ ಜಿಲ್ಲಾ ನ್ಯಾಯಾಲಯ ಕಳೆದ ವರ್ಷ ಅಕ್ಟೋಬರ್ 14ರಂದು ವೈಜ್ಞಾನಿಕ ತನಿಖೆಯ ಮನವಿಯನ್ನು ತಳ್ಳಿ ಹಾಕಿತ್ತು.

ಹಿಂದೂ ಕಕ್ಷಿದಾರರು ಸಲ್ಲಿಸಿದ ಮನವಿಯ ಅನ್ವಯ ವೈಜ್ಞಾನಿಕ ತನಿಖೆ ನಡೆಸಬೇಕು. ಇಲ್ಲಿರುವ ವಿನ್ಯಾಸ ಯಾವ ಕಾಲದ್ದು ಎಂಬುದನ್ನು ಪತ್ತೆ ಮಾಡಬೇಕು ಎಂದು ಹೈಕೋರ್ಟ್ ನಿರ್ದೇಶನ ನೀಡಿದೆ.

## ಒಂದು ಪರೀಕ್ಷೆ ಸಾಮರ್ಥ್ಯ ನಿರ್ಧರಿಸದು

**ಪ್ರಧಾನ್**

ನವದೆಹಲಿ, ಮೇ 12 - ಒಂದು ಪರೀಕ್ಷೆ ವ್ಯಕ್ತಿಯ ಸಾಮರ್ಥ್ಯವನ್ನು ನಿರ್ಧರಿಸುವುದಿಲ್ಲ. ನಿರಂತರ ಪ್ರಯತ್ನ ಪಡುವವರಿಗೆ ಯಶಸ್ಸು ದೊರೆಯುತ್ತದೆ ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಸಿ.ಬಿ.ಎಸ್.ಇ. 10 ಹಾಗೂ 12ನೇ ತರಗತಿ ಪರೀಕ್ಷೆಗಳ ಫಲಿತಾಂ ಶದ ನಂತರ ತಿಳಿಸಿದ್ದಾರೆ. ವರ್ಷವಿಡೀ ಕಠಿಣ ಪರಿಶ್ರಮದಿಂದ ದೊರೆತ ಯಶಸ್ಸನ್ನು ಸಂಭ್ರಮಿಸಿ. ಉತ್ತಮ ಭವಿಷ್ಯಕ್ಕಾಗಿ ಹಾರೈಕೆಗಳು ಎಂದು ಸಚಿವರು ಹೇಳಿದ್ದಾರೆ. ಆದರೆ, ಕೆಲ ಮಿತ್ರರಿಗೆ ನಿರೀಕ್ಷೆಯ ಹಂತದ ಫಲಿತಾಂಶ ಬರದೇ ಇರಬಹುದು. ಅವರು ಎದೆಗುಂದಬೇಕಿಲ್ಲ. ಒಂದು ಪರೀಕ್ಷೆ ವ್ಯಕ್ತಿಗಳ ನಿಜವಾದ ಸಾಮರ್ಥ್ಯ ನಿರ್ಧರಿಸುವುದಿಲ್ಲ ಎಂದು ಪ್ರಧಾನ್ ಹೇಳಿದ್ದಾರೆ.

ಕಠಿಣ ಪರಿಶ್ರಮ ಮುಂದುವರೆಸಿ ಹಾಗೂ ನಿಮ್ಮ ಕನಸುಗಳನ್ನು ಬೆನ್ನಟ್ಟಿ. ಪ್ರಯತ್ನ ಎಂದೂ ಬಿಡದವರಿಗೆ ಯಶಸ್ಸು ಸಿಗುತ್ತದೆ ಎಂದವರು ತಿಳಿಸಿದ್ದಾರೆ.

## ಲೈಂಗಿಕ ಪೀಡನೆ ಸಮಿತಿ ಪರಿಶೀಲನೆಗೆ ಸೂಚನೆ

ನವದೆಹಲಿ, ಮೇ 12 - ಎಲ್ಲಾ ಸಚಿವಾಲಯಗಳು ಹಾಗೂ ಇಲಾಖೆಗಳಲ್ಲಿ ಲೈಂಗಿಕ ಪೀಡನೆ ತಡೆ ಸಮಿತಿಗಳನ್ನು ರಚಿಸಿರುವ ಬಗ್ಗೆ ಕಾಲಮಿತಿಯಲ್ಲಿ ಪರಿಶೀಲಿಸುವಂತೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದೆ.

ಲೈಂಗಿಕ ಪೀಡನೆ ತಡೆ ಕಾಯ್ದೆ 2013 ಅನ್ನು ಜಾರಿಗೆ ತರುವಲ್ಲಿ ಗಂಭೀರ ಲೋಪ ಗಳಾಗಿವೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

## ಮಕ್ಕಳಿಗೆ ಒತ್ತಡ ಹಾಕಬೇಡಿ : ಡಾ. ಶಿಲ್ಪಶ್ರೀ



ದಾವಣಗೆರೆ, ಮೇ 12- ಮಕ್ಕಳ ಮನಸ್ಸು ಸೂಕ್ಷ್ಮ. ಅವರಲ್ಲಿ ವೈವಿಧ್ಯಮಯ ಭಾವನೆಗಳು ಹರಿದಾಡುತ್ತಿರುತ್ತವೆ. ಆ ಭಾವನೆಗಳು ಕ್ರಮೇಣ ವಿಕಾಸಗೊಂಡು ಪ್ರಬುದ್ಧತೆ ಪಡೆಯುತ್ತವೆ. ಆದರೆ ಇಂದಿನ ದಿನಗಳಲ್ಲಿ ಪೋಷಕರು ತಮ್ಮ ಆಸೆ, ಆಕಾಂಕ್ಷೆಗಳನ್ನು ಮಕ್ಕಳು ಈಡೇರಿಸಲಿ ಎಂದು ಅವರಿಗೆ ಒತ್ತಡ ಹಾಕುತ್ತಾರೆ. ಇದರಿಂದ ವಿಚಲಿತರಾಗುವ ಮಕ್ಕಳು ವಿಕಾಸ ಗೊಳ್ಳುವ ಮುನ್ನವೇ ಮುದುಡಿ ಹೋಗುವ ಸಾಧ್ಯತೆಗಳೇ ಹೆಚ್ಚು ಎಂದು ಡಾ. ಶಿಲ್ಪಶ್ರೀ ನಾಡಿಗೇರ್ ಹೇಳಿದರು.

ನಗರದ ಲೆಟ್ ಅಸ್ ಲರ್ನ್ ಶಾಲೆಯ ವಾರ್ಷಿಕೋತ್ಸವ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು. ಪೋಷಕರು ಮಕ್ಕಳ ಮಾನಸಿಕ ಹಾಗೂ ದೈಹಿಕ ಆರೋಗ್ಯದ ಕುರಿತು ಕಾಳಜಿ ವಹಿಸಬೇಕು ಎಂದು ಕರೆ ನೀಡಿದರು.


ಅತಿಥಿಯಾಗಿ ಆಗಮಿಸಿದ್ದ ರಾಮಚಂದ್ರ ಶೆಟ್ಟರ್ ಮಾತನಾಡಿ, ಮಕ್ಕಳ ಸಾಮಾಜಿಕ ಮತ್ತು ಭಾವನಾತ್ಮಕ ವಿಕಾಸದ ಕುರಿತು ಮಾತನಾಡಿದರು.

ಶಾಲಾ ಮುಖ್ಯೋಪಾಧ್ಯಾಯರಾದ ಬಿ.ಎಸ್. ವಿದ್ಯಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಅತಿಥಿಗಳಾದ ಪೂರ್ಣಿಮಾ ಕಾಮತ್ ಪ್ರಶಸ್ತಿ ಪ್ರದಾನ ಮಾಡಿದರು. ಶಾಲೆಯ ಅಧ್ಯಕ್ಷ ಬಿ.ಎಸ್. ಬಸವರಾಜ್ ಮತ್ತು ಶಿಕ್ಷಕಿಯರು ಸಹಾಯಕರಾದ ಶ್ರೀಮತಿ ಲಕ್ಷ್ಮಿ ಅವರು ಹಾಗೂ ಮಕ್ಕಳ ಪಾಲಕ-ಪೋಷಕರು ಸಮಾರಂಭದಲ್ಲಿ ಉಪಸ್ಥಿತರಿದ್ದರು.

ಶಿಕ್ಷಕಿ ವಸಂತ ಸ್ವಾಗತಿಸಿದರು. ವಾಣಿಶ್ರೀ ಅತಿಥಿಗಳನ್ನು ಪರಿಚಯಿಸಿದರು. ಸೌಭಾಗ್ಯ ಹಿರೇಮಠ ನಿರೂಪಿಸಿದರು.

## ಸಿದ್ಧಗಂಗಾ ಸಿಬಿಎಸ್‌ಇ 10ನೇ ತರಗತಿ : ಶೇ. 100 ಫಲಿತಾಂಶ




### ಶ್ರೀರಕ್ಷಾ ಶ್ರೀನಿವಾಸ್ ಪ್ರಥಮ

ದಾವಣಗೆರೆ, ಮೇ 12- ಕಳೆದ ಫೆಬ್ರವರಿ-ಮಾರ್ಚ್‌ನಲ್ಲಿ ನಡೆದ 10 ನೇ ತರಗತಿ ಸಿಬಿಎಸ್‌ಸಿ ಪರೀಕ್ಷೆ ಫಲಿತಾಂಶ ಪ್ರಕಟವಾಗಿದ್ದು, ನಗರದ ಸಿದ್ಧಗಂಗಾ ಶಾಲೆಗೆ 100 ಕ್ಕೆ 100 ಫಲಿತಾಂಶ ಬಂದಿದೆ.

ಶ್ರೀರಕ್ಷಾ ಶ್ರೀನಿವಾಸ್ ಶೇ.95.80 ಪಡೆದಿದ್ದಾಳೆ. ಇಂಗ್ಲಿಷ್-91, ಹಿಂದಿ-95, ಗಣಿತ-97, ವಿಜ್ಞಾನ-98, ಸಮಾಜ-98. ಒಟ್ಟು 500 ಕ್ಕೆ 479 ಅಂಕಗಳನ್ನು ಪಡೆದು ಪ್ರಥಮ ಸ್ಥಾನದಲ್ಲಿದ್ದಾಳೆ. ಶ್ರಾವಣಿ ಪೂಜಾರಿ ಶೇ. 95.20, ಚಿನ್ಮಯಿ ಶೇ. 93.80, ಸಮೀರ್ ಆರ್.ಎಸ್. ಶೇ. 93.80, ತೇಜಸ್ ಆರ್. ಭಟ್ ಶೇ. 93.60, ಮೇಘರಾಜ ಸ್ವಾಮಿ ಶೇ. 92.40, ಮಿಥುನ್ ಕೆ.ಸಿ. ಶೇ. 92, ಮಧುಶ್ರೀ ಹೆಚ್.ಆರ್. ಶೇ. 90.40, ಭಾವನಾ ಸಿ.ಜಿ. ಶೇ. 91.20, ಪಡೆದಿದ್ದಾರೆ. 16 ಮಕ್ಕಳು ಅತ್ಯುನ್ನತ ಶ್ರೇಣಿಯಲ್ಲಿ, 47 ಮಕ್ಕಳು ಪ್ರಥಮ ದರ್ಜೆಯಲ್ಲಿ, ಮೂವರು ಮಕ್ಕಳು ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ.

ಅತ್ಯುತ್ತಮ ಫಲಿತಾಂಶ ನೀಡಿದ ಮಕ್ಕಳನ್ನು ಪ್ರಾಚಾರ್ಯರಾದ ಗಾಯತ್ರಿ ಚಿಮ್ಮಡ್ ಅಭಿನಂದಿಸಿದ್ದಾರೆ.


**ದ್ವಿತೀಯ ವರ್ಷದ ಚಿರಸ್ಮರಣೆ**



**ದಿ|| ಶ್ರೀಮತಿ ಶಾರದಮ್ಮನವರು ಆನೆಕೊಂಡದ ಮಠ**

**ಲಿಂಗೈಕ್ಯ : 13.05.2021**

**(ಆನೆಕೊಂಡ ಮಠದ ಶ್ರೀ ಎಂ. ಮಹದೇವಯ್ಯ ಇವರ ಧರ್ಮಪತ್ನಿ)**

*ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷಗಳಾದವು.*

*ಸದಾ ನಿಮ್ಮ ಚಿರ ನೆನಪಿನಲ್ಲಿರುವ*

**ಶ್ರೀ ಮಹದೇವಯ್ಯ ಮತ್ತು ಮಕ್ಕಳು ಸೊಸೆ ಹಾಗೂ ಮೊಮ್ಮಕ್ಕಳು**

ಎಸ್.ಎಸ್. ಲೇಔಟ್ 'ಬಿ' ಬ್ಲಾಕ್, ದಾವಣಗೆರೆ.


# ಆಧುನಿಕ ಜಗತ್ತಿಗೆ ಜ್ಞಾನ, ಕೌಶಲ್ಯ ತಂತ್ರಜ್ಞಾನ ತರಬೇತಿ ಅವಶ್ಯ

### ದಾವಣಗೆರೆ ವಿವಿ ಕುಲಪತಿ ಪ್ರೊ. ಬಿ.ಡಿ. ಕುಂಬಾರ



ದಾವಣಗೆರೆ, ಮೇ 12- ಪ್ರಸ್ತುತ ಆಧುನಿಕ ಜಗತ್ತಿಗೆ ಜ್ಞಾನ, ಕೌಶಲ್ಯ ಮತ್ತು ತಂತ್ರಜ್ಞಾನ ತರಬೇತಿ ಅವಶ್ಯ ಎಂದು ದಾವಣಗೆರೆ ವಿವಿ ಕುಲಪತಿ ಪ್ರೊ. ಬಿ.ಡಿ. ಕುಂಬಾರ ಹೇಳಿದರು.

ನಗರದ ಮಾಕನೂರು ಮಲ್ಲೇಶಪ್ಪ ಶಿಕ್ಷಣ ಮಹಾವಿದ್ಯಾಲಯದ ವಿದ್ಯಾರ್ಥಿ ಸಂಘ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳ ವ್ಯಕ್ತಿತ್ವ ಹಾಗೂ ಭವಿಷ್ಯ ರೂಪಿಸುವಲ್ಲಿ ಶಿಕ್ಷಕರ ಪಾತ್ರ ಅನನ್ಯ. ಬಿ.ಇಡಿ. ಪ್ರಶಿಕ್ಷಣಾರ್ಥಿಗಳು ಶಿಕ್ಷಕ ವೃತ್ತಿಯನ್ನು ಪೂಜ್ಯನೀಯ ಭಾವನೆಯಿಂದ ಸ್ವೀಕರಿಸಬೇಕೆಂದು ಕರೆ ನೀಡಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ತರಳಬಾಳು ವಿದ್ಯಾಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಪ್ರೊ.ಎಸ್.ಬಿ. ರಂಗನಾಥ್ ಮಾತನಾಡಿ, ವಿದ್ಯಾರ್ಥಿಗಳು ಶಿಕ್ಷಣದ ಜೊತೆಗೆ ಜೀವನ ಮೌಲ್ಯಗಳು ಮತ್ತು ಆದರ್ಶಗಳನ್ನು ರೂಢಿಸಿಕೊಳ್ಳುವ ಮೂಲಕ ಸಮಾಜಕ್ಕೆ ಉಪಯುಕ್ತ ಕೊಡುಗೆ ನೀಡುವ ದಿಸೆಯಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಬೇಕೆಂದು ತಿಳಿ ಹೇಳಿದರು.

ತರಳಬಾಳು ವಿದ್ಯಾಸಂಸ್ಥೆ ಆಡಳಿತಾಧಿಕಾರಿ ಡಾ. ಹೆಚ್.ವಿ. ವಾಮದೇವಪ್ಪ ಮಾತನಾಡಿ, ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಯುಗದಲ್ಲಿ ಅನೇಕ ಶಿಕ್ಷಣದ ಕೌಶಲ್ಯಗಳನ್ನು ರೂಢಿಸಿಕೊಳ್ಳಬೇಕು ಎಂದರು.

ಡಿಜಿಟಲ್ ಗ್ರಂಥಾಲಯ ಹಾಗೂ ಇತರೆ ಮೂಲಗಳಿಂದ ಮಾಹಿತಿ ಸಂಗ್ರಹಿಸಿ ಯಶಸ್ಸಿನ ಪಥದತ್ತ ಹೆಜ್ಜೆ ಹಾಕುವತ್ತ ಚಿಂತನೆ ಅಗತ್ಯ ಎಂದು ಹೇಳಿದರು.

ಕಾಲೇಜಿನ ಪ್ರಾಚಾರ್ಯ ಡಾ.ಕೆ.ಟಿ. ನಾಗರಾಜನಾಯ್ಕ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಸಹಾಯಕ ಪ್ರಾಧ್ಯಾಪಕರಾದ ಡಾ. ಜಿ.ಎಂ. ಶಶಿಕಲಾ ಸ್ವಾಗತಿಸಿದರು. ಪ್ರಶಿಕ್ಷಣಾರ್ಥಿ ಡಿ.ಕೆ. ಸುಮ ನಿರೂಪಿಸಿದರು. ಉಪನ್ಯಾಸಕಿ ಜಿ.ಹೆಚ್.ಆಶಾ ವಂದಿಸಿದರು.


YOGI RAM
SHASHI EDUCATIONAL TRUST ®
LALITHA INTERNATIONAL PUBLIC SCHOOL
#67/1, LOKIKERE MAIN ROAD, DAVANGERE
CONTACT: 7022004109, 6364870055, 7022004042, 9980629965,
HEARTY CONGRATULATIONS TO ALL THE 10th CBSE TOPPERS 2023
100% RESULT
500/440 SHREYA B S 1st RANK
500/437 PRATHIKSHA S L 2nd RANK
500/423 LATHA K R
500/417 K S ASHWINYA
500/413 MILANA G
500/407 MURALI A C
500/399 PRIYANKA G M
500/395 JEEVAN G K
500/376 LAKSHMI M
500/372 NANDITHA G M
500/363 KEERTHI B G
500/355 MAHANTESH R P
500/351 MANU B M
500/348 MANJUNATHA C
500/348 TEJASHWI E R
500/347 BINDU SHEKAR
500/343 AMRUTHA G A
500/343 BHAVANA P B
500/338 DEEKSHA S M
500/327 VARSHITHA H S
500/317 INCHARA D M
500/317 PRUTHVI J S
500/315 SHUBHA G D
500/315 RUTHIKA N M
500/314 RACHANA G
500/300 PREETHAM H K
500/295 CHETAN H M
500/293 DARSHAN G U
500/289 RAGHAVENDRA H B
500/287 VIJUTH BRAHMA G U
500/280 NIRANJAN S
500/266 GANESH V
500/266 PREETHAM R
500/260 SHUBHA R G
500/260 THANU T M
500/256 VIKAS PATEL
500/255 TARUN G V
500/254 JEEVAN S N
500/248 NAGA BALAJI V S
500/246 GAGAN M
The Management, Principal and Teaching Staff


Sree Bhagwan Mahaveer Educational Trust(R)
JAIN VIDYALAYA
STATE/CBSE SCHOOL &
COMPOSITE P U COLLEGE
SPECIAL FOCUS ON THE HOLISTIC DEVELOPMENT OF EACH STUDENT
CBSE Grade 10 result 2023
Congratulations
100% Result
PRERANA K KANASAPLAR 94.8%
INDURISHITH S P 93.3%
SHREYAS P RATHOD 92.8%
NISHIT K JAIN 89.6%
YADUNANDAN R 88.6%
TANISH A SANGHVI 87.8%
GUNEEN V 87.4%
SANCHI S GANDHI 87.2%
NIRAV D PATEL 87%
PREETHAM V DIXIT 86.6%
AAKARSHITA B 84%
MEENAL L PATEL 82.4%
DHEERAJ S KUMAR 81.2%
KASHVI S JAIN 80.4%
PARTH H DIWANI 79.6%
NAYANA G M 76.6%
PRATHIKSHA A P 75.4%
PALASH V JAIN 73.6%
JAINAM D JAIN 72.6%
DHRUVI C RATHOD 72.4%
PRANAV G B 72.2%
AMRUTHA H 71.2%
BINDU A N 70.2%
MOKSH S JAIN 69.8%
DAMAYANTHI K RAJPUROHIT 67.6%
B N NAYANA GOUDA 67%
SUHITH C N 66.8%
VITRAG BAFNA 64%
SHILPA R JAT CHOUDHARY 63%
ANKITH KUMAR 61.8%
BHARATH B R 60.8%
PRAVEEN C GURJAR 60.6%
RAKESH GOWDA G R 60%
LIKHITH H 59.8%
GUNJAN R JAIN 58.8%
HITESH SINGH RAO 57.6%
ROUNAK D S 56.4%
SPOORTHI G 56%
PREETHAM C S 53%
CBSE & PU COLLEGE CAMPUS
ADMISSIONS ARE OPEN FOR
* PLAY HOME TO 10TH CLASS
* I PUC AND II PUC SCIENCE AND COMMERCE
SCIENCE (PCMB) (PCMCS)
COMMERCE (EABCS) (EABS)
STATE CAMPUS
CAMPUS
# 3348/182,183 Kasaba Hobli, Shamanur Davangere-577004
www.jainvidyalayadvg.com
9844474481 / 9844474485
HEAD OFFICE
#65, 5th Cross, P. J. Extension, Davangere - 577002.
Ph : 08192 232424
Management Members Congratulate the performers and Staff Members for bringing in the performance
Sri Ramesh Kumar J. Secretary
Sri Ramesh Kumar H. President

**ಜೈ ಶ್ರೀಮನ್ನಾರಾಯಣ**
ವಿಕಾಸ ತರಂಗಿಣಿ, ದಾವಣಗೆರೆ
28ನೇ ವರ್ಷದ
**ಉಚಿತ ಮಜ್ಜಿಗೆ ವಿತರಣೆ ಕಾರ್ಯಕ್ರಮ**
ಏಪ್ರಿಲ್ 1 ರಿಂದ ಮೇ 15ರವರೆಗೆ.
ಸ್ಥಳ : ಮಹಾನಗರ ಪಾಲಿಕೆ ಆವರಣ
ಇಂದಿನ ಮಜ್ಜಿಗೆ ಪ್ರಾಯೋಜಕರು :
ಜೈ ಶ್ರೀಮನ್ನಾರಾಯಣ ಇವರ ಸೇವಾರ್ಥ.

**ಸೈಟು ಮಾರಾಟಕ್ಕಿದೆ**
ಡಾಲರ್ಸ್ ಕಾಲೋನಿಯ 2ನೇ ಹಂತದಲ್ಲಿ 30x50 ಅಳತೆಯ (ಉತ್ತರ ಮುಖ) ಸೈಟು ಮಾರಾಟಕ್ಕಿದೆ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ, ನೇರವಾಗಿ ಸಂಪರ್ಕಿಸಿ :
99723 43286

**ಸೈಟ್ ಮಾರಾಟಕ್ಕೆ**
S. S. ಹೈಟೆಕ್ ಹಾಸ್ಪಿಟಲ್ ಹಿಂಭಾಗ
30X38 ಉತ್ತರ ಪಶ್ಚಿಮ ಕಾರ್ನರ್
30X40 ಉತ್ತರ
ಕಿರಣ್ ಭೂಸನೂರ್ (ಏಜೆಂಟ್)
97315-63409
J. H. PATEL ಬಡಾವಣೆ 20X30 (24ಲಕ್ಷ)
KHB 20X30 (14 ಲಕ್ಷ) ಪೂರ್ವ ಸೈಟ್ ಸೇಲ್‌ಗೆ

**ಮನೆಗಳು ಬಾಡಿಗೆಗೆ/ ಲೀಸ್‌ಗೆ ಇವೆ**
ದಾವಣಗೆರೆ ವಿದ್ಯಾನಗರದಲ್ಲಿ ದೇವಸ್ಥಾನ ಹಾಗೂ ಬಸ್ ಸ್ಟಾಪ್‌ಗೆ ಹತ್ತಿರವಿರುವ ಮನೆಗಳು ಬಾಡಿಗೆಗೆ ಅಥವಾ ಲೀಸ್‌ಗೆ ಇವೆ. ಸಂಪರ್ಕಿಸಿ :
96322 74557

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**EC / ಇಸಿ, E-swathu, Khatha Change Building Licence & Other Property Documents**
96118-66449

**ಮನೆ ಬಾಡಿಗೆಗೆ ಇದೆ**
ವಿದ್ಯಾನಗರ 2ನೇ ಬಸ್ ಸ್ಟಾಪ್ ಹತ್ತಿರ, 3 ಬೆಡ್ ರೂಮ್ ಉತ್ತರ ದಿಕ್ಕಿನ ಸುಸಜ್ಜಿತ ಮೊದಲನೇ ಮಹಡಿಯ ಮನೆ ಬಾಡಿಗೆಗೆ ಇದೆ, ಬೋರ್ ವೆಲ್ & ಕಾರ್ಪೊರೇಷನ್ ನೀರಿನ ಸೌಲಭ್ಯವಿರುತ್ತದೆ. ಆಸಕ್ತರು ಸಂಪರ್ಕಿಸಿ :
87490 98538, 97391 19921

**ಕಾರುಗಳು ಮಾರಾಟಕ್ಕಿವೆ**
Maruthi CELERIO Automatic 2017
MAHINDRA TUV300 2017
RENAULT DUSTER 2013
SWIFT DZIRE
ಪೆಟ್ರೋಲ್ 3.2 ಲಕ್ಷ ರೇಟ್
DAIVIK IYNAHALLI
99456 43223

**ಬೇಕಾಗಿದ್ದಾರೆ**
ಅಂಗಡಿಯಲ್ಲಿ ಕೆಲಸ ಮಾಡಲು 18-30 ವಯಸ್ಸಿನ ಹುಡುಗರು ಮತ್ತು ಡ್ರೈವರ್ ಬೇಕಾಗಿದ್ದಾರೆ. ಸಂಪರ್ಕಿಸಿ :
ಪ್ರಕಾಶ್ ಟಿವಿ ಸೆಂಟರ್
ಮುರುಘರಾಜೇಂದ್ರ ಕಾಂಪ್ಲೆಕ್ಸ್, ಕುರುಬರ ಹಾಸ್ಟೆಲ್ ಎದುರು, ಹದಡಿ ರೋಡ್, ದಾವಣಗೆರೆ.

**ಮನೆ ಬಾಡಿಗೆಗೆ**
ಸರಸ್ವತಿ ಬಡಾವಣೆ 'ಬಿ' ಬ್ಲಾಕ್, 1ನೇ ಮೇನ್, 4ನೇ ಕ್ರಾಸ್, ಕೆ.ಎಸ್.ಎಸ್. ಕಾಲೇಜ್ ಎದುರು ರಸ್ತೆ, ಶ್ರೀಕರ #829/15, ಉತ್ತರ ದಿಕ್ಕು, 2 ಬೆಡ್ ರೂಂ, ಬೋರ್ / ಮುನ್ಸಿಪಲ್ ನೀರು, ಕಾರ್ ಪಾರ್ಕಿಂಗ್, 1ನೇ ಮಹಡಿಯಲ್ಲಿ ಮನೆ ಬಾಡಿಗೆಗೆ ಇದೆ.
96203 99426

**ಬೇಕಾಗಿದ್ದಾರೆ**
ಹೋಟೆಲ್ ನಲ್ಲಿ ಕ್ಲೀನಿಂಗ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ಸಂಪರ್ಕಿಸಿ.
87110 04905

**ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ**
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
ಗ್ರಾಮಾಂತರದವರಿಗೂ ಅವಕಾಶವುಂಟು.
ಆಕರ್ಷಕ ವೇತನದೊಂದಿಗೆ ಊಟ - ವಸತಿ ಸೌಲಭ್ಯ ಇರುತ್ತದೆ. ಸಂಪರ್ಕಿಸಿ :
98442-94446

**ಫಸಲಿಗೆ ಬಂದ ಮಾವಿನ ತೋಟ ಖೇಣಿಗೆ ಇದೆ**
ದೊಡ್ಡಬಾತಿ ಮೇನ್ ರೋಡ್
ಹಳೇ ಪಿ.ಬಿ. ರಸ್ತೆ,
90196 11201

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಹೌಸ್ ಕೀಪಿಂಗ್ ಹುಡುಗರು. ಸಂಬಳ 11,000 ಊಟ, ರೂಂ ಉಚಿತ.
97400 98064
97400 98047

**ವಾಣಿಜ್ಯ ಕಟ್ಟಡ ಬಾಡಿಗೆಗೆ**
ಹದಡಿ ಮುಖ್ಯ ರಸ್ತೆಯಲ್ಲಿರುವ ಟಿವಿಎಸ್ ಶೋರೂಂ ಪಕ್ಕ ಹಾಗೂ ಉದಯ ಬಜಾರ್ ಎದುರುಗಡೆ ಇರುವ ಸುಸಜ್ಜಿತ ವಾಣಿಜ್ಯ ಕಟ್ಟಡ ಬಾಡಿಗೆಗಿದೆ. ನೆಲ ಮಹಡಿ 1200 ಅಡಿಗಳು, ಮೊದಲನೇ ಮಹಡಿ 1600 ಅಡಿಗಳು. ಸೆಲ್ಲರ್ 2400 ಅಡಿಗಳು ಸಂಪರ್ಕಿಸಿ.
96205 95579

**PART TIME JOBS**
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 ರಿಂದ 20,000 ಸಂಪಾದಿಸಿ (ಕೋರಿಯರ್ ಸೌಲಭ್ಯವಿದೆ)
87490 98879

**ವಸತಿಯುತ ಶಾಲೆಗೆ ಶಿಕ್ಷಕಿಯರು ಬೇಕಾಗಿದ್ದಾರೆ**
Maths - 2, Social - 2
ಊಟ, ವಸತಿ ಸೌಲಭ್ಯವಿದೆ.
SRP ಪ್ರೌಢಶಾಲೆ, 17ನೇ ಕ್ರಾಸ್, ಆಂಜನೇಯ ಬಡಾವಣೆ, ದಾವಣಗೆರೆ-4.
91645 05229, 91136 31266

**TALLY PRIME OPERATOR ಬೇಕಾಗಿದ್ದಾರೆ**
ಅನುಭವವುಳ್ಳವರು
ಸಂಪರ್ಕಿಸಿ :
72596 35931

**ಶಿಕ್ಷಕ-ಶಿಕ್ಷಕಿಯರು ಬೇಕಾಗಿದ್ದಾರೆ**
ವಿದ್ಯಾರ್ಹತೆ : B.A, B.Ed, B.Sc, B.Ed, B.P.Ed, Degree
ಆದ ಅಭ್ಯರ್ಥಿಗಳು 7 ದಿನದ ಒಳಗಾಗಿ ಅರ್ಜಿ ಸಲ್ಲಿಸಿರಿ. ಕಾರ್ಯದರ್ಶಿ
ಶ್ರೀ ವಿದ್ಯಾಜ್ಯೋತಿ ಪ್ರೌಢಶಾಲೆ,
ವೀರಭದ್ರಪ್ಪ ನಗರ, ಬೇತೂರು ರಸ್ತೆ, ದಾವಣಗೆರೆ-01. ಅನುದಾನಕ್ಕೊಳಪಡುವ ಶಾಲೆ.
91489 32083

**ಅಗತ್ಯವಿದೆ**
ಸ್ವತಂತ್ರ 4 BHK ಅಥವಾ 5 BHK ಮನೆ ಬಾಡಿಗೆಗೆ ಅಗತ್ಯವಿದೆ.
ಅಥವಾ ಒಂದೇ ಕಟ್ಟಡದಲ್ಲಿ ತಲಾ 2 ಬಿಎಚ್‌ಕೆಯ 2 ಮನೆಗಳು ಬಾಡಿಗೆಗೆ ಅಗತ್ಯವಿದೆ. (Non Veg allowed)
ಸಂಪರ್ಕ: 9620711971

**Basic Computer**
Photoshop, Advanced Excel and Tally prime course at Rs. 1500/-
Let Commerce Academy
Opposite Stadium complex, Near Bapuji Stadium.
Contact :
93801 70045


# ಕಾರ್ಯಕರ್ತರ ಸಮ್ಮುಖದಲ್ಲಿ ಜನ್ಮದಿನ ಆಚರಿಸಿಕೊಂಡ ಬಿ.ಪಿ.ಹರೀಶ್



ಮಲೇಬೆನ್ನೂರು, ಮೇ 12- ಇಲ್ಲಿನ ಶ್ರೀ ಕಾಳಿಕಾದೇವಿ ದೇವಸ್ಥಾನದಲ್ಲಿ ಶುಕ್ರವಾರ ಸಂಜೆ ಮಾಜಿ ಶಾಸಕ ಹಾಗೂ ಬಿಜೆಪಿ ಅಭ್ಯರ್ಥಿ ಬಿ.ಪಿ. ಹರೀಶ್ ಅವರು ಕಾರ್ಯಕರ್ತರ ಒತ್ತಾಸೆಯಂತೆ ಕೇಕ್ ಕತ್ತರಿಸಿ ತಮ್ಮ 63ನೇ ಜನ್ಮದಿನವನ್ನು ಸರಳವಾಗಿ ಆಚರಿಸಿಕೊಂಡರು.

ಈ ವೇಳೆ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ ಹರೀಶ್ ಅವರು, ನಿಮ್ಮೆಲ್ಲರ ಪರಿಶ್ರಮದ ಫಲವಾಗಿ ನಾವು ಗೆಲುವಿನ ಬಾಗಿಲಲ್ಲಿ ಬಂದು ನಿಂತಿದ್ದೇವೆ. ಶನಿವಾರ ಮತ ಎಣಿಕೆ ನಂತರ ನಮ್ಮ ಗೆಲುವಿನ ಶುಭ ಶುದ್ಧಿ ಹೊರಬರುವ ಎಲ್ಲಾ ಲಕ್ಷಣಗಳಿವೆ.

ಹರಿಹರ ನಗರದಲ್ಲಿ ಈ ಬಾರಿ ಬಿಜೆಪಿಗೆ ಉತ್ತಮ ಮತದಾನ ಆಗಿರುವ ಬಗ್ಗೆ ವರದಿಗಳು ಬಂದಿದ್ದು, ನಾವು ಗೆದ್ದ ನಂತರ ಕ್ಷೇತ್ರದಲ್ಲಿ ಜನರ ನಿರೀಕ್ಷೆಯಂತೆ ಕೆಲಸ ಮಾಡುವ ಜವಾಬ್ದಾರಿಯನ್ನು ಎಲ್ಲರೂ ತೆಗೆದುಕೊಳ್ಳಬೇಕು. ಕ್ಷೇತ್ರದ ಜನರು ಈ ಬಾರಿ ತೋರಿಸಿರುವ ಪ್ರೀತಿ-ವಿಶ್ವಾಸಕ್ಕೆ ಋಣಿಯಾಗಿರುತ್ತೇನೆ. ಜನ್ಮದಿನದ ಅಂಗವಾಗಿ ನನಗೆ ಶುಭ ಕೋರಿದ ಎಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇನೆ ಮತ್ತು ಹರಿಹರ ತಾಲ್ಲೂಕಿನ ಬಹುತೇಕ ಕಡೆ ದೇವಸ್ಥಾನಗಳಲ್ಲಿ ನನ್ನ ಗೆಲುವಿಗೆ ಪ್ರಾರ್ಥಿಸಿ, ವಿಶೇಷ ಪೂಜೆ ಸಲ್ಲಿಸಿರುವುದು ನನ್ನ ಹೃದಯ ತುಂಬಿ ಬಂದಿದೆ ಎಂದು ಹರೀಶ್ ಬಾವುಕರಾದರು.

## ಪತ್ರಕರ್ತ ಚಂದ್ರಣ್ಣ ಕುಟುಂಬದ 32 ಜನ ಮತದಾನ



ದಾವಣಗೆರೆ, ಮೇ 12- ನಗರದ ಹಿರಿಯ ಪತ್ರಕರ್ತ ಕೆ. ಚಂದ್ರಣ್ಣ ಹಾಗೂ ಸಹೋದರರಾದ ಮಲ್ನಾಡವಾಣಿ ಸಂಪಾದಕ ಕೆ. ಏಕಾಂತಪ್ಪ, ಕೆ. ಶಂಕರ್, ಕೆ. ವೆಂಕಟೇಶ್, ಸಹೋದರಿ ಶ್ರೀಮತಿ ಯಶೋಧ ಹಂದ್ರಾಳ್, ಅವರ ಪತಿ ಬಿಎಸ್‌ಎಫ್‌ನ ಡಿಐಜಿ (ನಿ) ವೈ.ವೈ. ಹಂದ್ರಾಳ್ ಸೇರಿದಂತೆ, ಅವರ ಕುಟುಂಬದ ಒಟ್ಟು 32 ಜನರು ಎಂಸಿಸಿ ಎ ಬ್ಲಾಕ್‌ನಲ್ಲಿನ ಬಕ್ಕೇಶ್ವರ ಪ್ರೌಢಶಾಲೆ ಮತಗಟ್ಟೆಯಲ್ಲಿ ಮತದಾನ ಮಾಡುವುದರ ಮೂಲಕ ಗಮವ ಸೆಳೆದರು.


## ಸಿಬಿಎಸ್‌ಸಿ : ಜೈನ್ ವಿದ್ಯಾಲಯಕ್ಕೆ ಶೇ.100 ಫಲಿತಾಂಶ

ದಾವಣಗೆರೆ, ಮೇ 12- ಶಾಮನೂರು ಹತ್ತಿರ ಇರುವ ಜೈನ್ ವಿದ್ಯಾಲಯಕ್ಕೆ ಸಿಬಿಎಸ್‌ಸಿ 10ನೇ ತರಗತಿ ಪರೀಕ್ಷೆಯಲ್ಲಿ ಶೇ.100ರಷ್ಟು ಫಲಿತಾಂಶ ಬಂದಿದೆ.

ಒಟ್ಟು 39 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, ಅವರಲ್ಲಿ 10 ವಿದ್ಯಾರ್ಥಿಗಳು ಉನ್ನತ ದರ್ಜೆ, 23 ವಿದ್ಯಾರ್ಥಿಗಳು ಪ್ರಥಮ ದರ್ಜೆ, 6 ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ.

ಶಾಲೆಯ ವಿದ್ಯಾರ್ಥಿನಿ ಪ್ರೇರಣ ಕೆ.ಕೆ. ಅವರು ಶೇ.94.8ರಷ್ಟು ಅಂಕ ಪಡೆದಿದ್ದರೆ, ಇಂದುರಿಶಿತ್ ಎಸ್.ಪಿ. ಶೇ.93.6ರಷ್ಟು ಹಾಗೂ ಶ್ರೇಯಸ್ ಪಿ.ರಾಥೋಡ್ ಶೇ.92.08 ಅಂಕ ಪಡೆದಿದ್ದಾರೆ.

# ಅಧಿಕಾರಕ್ಕೆ ಬರುವ ವಿಶ್ವಾಸ : ಬೊಮ್ಮಾಯಿ



ಬೆಂಗಳೂರು, ಮೇ 12 - ಕರ್ನಾಟಕದಲ್ಲಿ ಬಿಜೆಪಿಯೇ ಮತ್ತೆ ಅಧಿಕಾರಕ್ಕೆ ಬರಲಿದೆ ಎಂಬ ಅಂಕಿ-ಅಂಶಗಳ ಮಾಹಿತಿ ಯನ್ನು ವರಿಷ್ಠರ ಗಮನಕ್ಕೆ ತಂದಿದ್ದೇನೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇಂದಿಲ್ಲಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮತದಾನ ಪೂರ್ಣಗೊಂಡ ಬಳಿಕ ರಾಜ್ಯಾದ್ಯಂತ ಮಾಹಿತಿ ಸಂಗ್ರಹಿಸಿ ಇಂದು ಬೆಳಿಗ್ಗೆ ವರಿಷ್ಠರನ್ನು ಸಂಪರ್ಕಿಸಿ ವರದಿ ನೀಡಿದ್ದೇನೆ. ಅವರು ಕೂಡ ಪಕ್ಷವೇ ಅಧಿಕಾರಕ್ಕೆ ಬರುತ್ತದೆ ಎಂಬ ವಿಶ್ವಾಸ ವ್ಯಕ್ತಪಡಿಸಿದ್ದಾರೆ ಎಂದರು.


ವರಿಷ್ಠರಿಗೆ ವರದಿ ನೀಡಿದ ನಂತರ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರನ್ನು ಭೇಟಿ ಮಾಡಿ ಮತದಾನದ ನಂತರದ ಪರಿಸ್ಥಿತಿಯನ್ನು ಮತ್ತು ಪಕ್ಷಕ್ಕೆ ಇರುವ ವಾತಾವರಣವನ್ನು ತಿಳಿಸಿದ್ದೇನೆ. ಅಷ್ಟೇ ಅಲ್ಲ, ಮುಂದಿನ ಪ್ರಕ್ರಿಯೆಗಳ ಬಗ್ಗೆ ಚರ್ಚೆ ಮಾಡಿದ್ದೇವೆ ಎಂದರು.

ಕಾಂಗ್ರೆಸ್‌ನವರಿಗೆ ಬಹುಮತ ಬರಲ್ಲ. ಹಾಗಾಗಿ ಬೇರೆ ಪಕ್ಷದವರ ಜತೆ ಮಾತನಾಡುವ ಪ್ರಯತ್ನ ಮಾಡುತ್ತಿದ್ದಾರೆ. ಅವರ ಶಾಸಕರ ಮೇಲೆ ಅವ ರಿಗೆ ನಂಬಿಕೆ ಇಲ್ಲ ಎಂದು ಆರೋಪಿಸಿದರು. ನಾನು ಮೊದಲಿಂದಲೂ ಒಂದೇ ಮಾತು ಹೇಳುತ್ತಾ ಬಂದಿದ್ದೇನೆ. ಬಹುಮತದ ಗಡಿ ದಾಟುತ್ತೇವೆ. ಮ್ಯಾಜಿಕ್ ನಂಬರ್ ತಲುಪುತ್ತೇವೆ. ಎಲ್ಲ ಕ್ಷೇತ್ರ, ಬೂತ್‌ಗಳಿಂದ ಗ್ರೌಂಡ್ ಮಾಹಿತಿ ತರಿಸಿದ್ದೇವೆ ಎಂದರು.

ಈಗ ನಮ್ಮ ಮುಂದೆ ಮೈತ್ರಿಯ ಪ್ರಶ್ನೆ ಇಲ್ಲ. ನಾವು ಬಹುಮತ ದಾಟುತ್ತೇವೆ. ಕಾಂಗ್ರೆಸ್‌ನವರು ಏನೇ ಸಭೆ ಮಾಡಲಿ. ಅವರಿಗೆ ಸಭೆ ಮಾಡುವ ಹಕ್ಕಿದೆ. ಎಲ್ಲ ಪಕ್ಷಗಳೂ ಸಭೆ ಮಾಡುತ್ತಾರೆ ಎಂದು ತಿಳಿಸಿದರು.

ಕಾಂಗ್ರೆಸ್ ಪಕ್ಷ 141 ಸ್ಥಾನ ಗಳಿಸಲಿದೆ ಎಂದು ಕಾಂಗ್ರೆಸ್ ರಾಜ್ಯಾಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿರುವ ಬಗ್ಗೆ ಪ್ರತಿಕ್ರಿಯಿಸಿದ ಬೊಮ್ಮಾಯಿ, ನಾಳೆಯವರೆಗೆ ಅವರು 141 ಸ್ಥಾನದ ಕನಸಿನಲ್ಲಿ ಸಂತೋಷವಾಗಿರಲಿ ಎಂದರು.

# 141 ಸ್ಥಾನಗಳಲ್ಲಿ ಗೆಲ್ಲುತ್ತೇವೆ : ಡಿಕೆಶಿ ವಿಶ್ವಾಸ



ಬೆಂಗಳೂರು, ಮೇ 12 - ಸಂಕಷ್ಟದಲ್ಲಿ ಪಕ್ಷವನ್ನು ಮುನ್ನಡೆಸಿದ್ದೇನೆ. ವಿಧಾನಸಭಾ ಚುನಾವಣೆಯಲ್ಲಿ ಅಧಿಕಾರಕ್ಕೆ ಬಂದರೆ, ಎಲ್ಲರೂ ನನಗೆ ಸಹಕಾರ ನೀಡುತ್ತಾರೆ ಎಂದು ಮುಖ್ಯಮಂತ್ರಿ ಸ್ಥಾನದ ಆಕಾಂಕ್ಷಿಯಾಗಿರುವ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದಿನೇಶ್ ಗುಂಡೂರಾವ್ ಅವರು ರಾಜ್ಯಾಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ ನಂತರ ಅಧಿಕಾರ ವಹಿಸಿಕೊಂಡು ಇಡೀ ರಾಜ್ಯಾದ್ಯಂತ ಸಂಚರಿಸಿ ಪಕ್ಷ ಸಂಘಟನೆ ಮಾಡಿದ್ದೇನೆ ಎಂದರು.

ಭ್ರಷ್ಟ ಬಿಜೆಪಿ ಆಡಳಿತದ ಹುಳುಕುಗಳನ್ನು ಎಳೆ ಎಳೆಯಾಗಿ ಬಿಡಿಸಿಟ್ಟು, ಪಕ್ಷದತ್ತ ಮತದಾರರು ಮುಖ ಮಾಡುವಂತೆ ಮಾಡಿದ್ದೇನೆ. ಪಕ್ಷಕ್ಕೆ ಏನು ಮಾಡಬೇಕೋ ಅದನ್ನು ಮಾಡಿದ್ದೇನೆ. ಶ್ರಮ ಹಾಕಿ ದುಡಿದಿದ್ದೇನೆ. ಈಗ ಬೇರೆ ಯಾವ ಸಂದರ್ಭವೂ ಉದ್ಭವವಾಗುವುದಿಲ್ಲ. ಎಲ್ಲರೂ ನನಗೆ ಸಹಕಾರ ಕೊಟ್ಟು ಆಶೀರ್ವಾದ ಮಾಡುತ್ತಾರೆಂಬ ವಿಶ್ವಾಸ ವ್ಯಕ್ತಪಡಿಸಿದರು.

ಎಕ್ಸಿಟ್ ಪೋಲ್ ಬಗ್ಗೆ ನಂಬಿಕೆ ಇಲ್ಲ. ನನ್ನ ಪ್ರಕಾರ 141 ಸ್ಥಾನ ಗೆಲ್ಲುತ್ತೇವೆ. ನಮ್ಮ ಸಮೀಕ್ಷೆಯಲ್ಲಿ ಎಕ್ಸಿಟ್ ಪೋಲ್ ಸಮೀಕ್ಷೆಗಿಂತ ಹೆಚ್ಚು ಮಾದರಿಗಳಿಂದ ಸಂಗ್ರಹ ಮಾಡಲಾಗಿದೆ. ಕಾಂಗ್ರೆಸ್ ಪರವಾಗಿ ದೊಡ್ಡ ಅಲೆ ಇದೆ ಎಂದರು.

ಎಕ್ಸಿಟ್ ಪೋಲ್ ಸಮಿಕ್ಷೆಗಿಂತ ಕಾಂಗ್ರೆಸ್ ಹೆಚ್ಚಿನ ಸ್ಥಾನ ಪಡೆಯಲಿದೆ ಹೊರತು ಕಡಿಮೆ ಆಗಲೂ ಸಾಧ್ಯವಿಲ್ಲ ಎಂದರು. ಎಕ್ಸಿಟ್ ಪೋಲ್‌ನಲ್ಲಿ ನಮ್ಮ ಪರ ವಿಶ್ವಾಸ ತೋರಿದ್ದು ಅದಕ್ಕೆ ಅಭಿನಂದನೆ ಸಲ್ಲಿಸುತ್ತೇನೆ. ಆದರೆ ಕಾಂಗ್ರೆಸ್ ಪಕ್ಷಕ್ಕೆ ನಿಚ್ಚಳ ಬಹುಮತ ಬರಲಿದೆ ಎಂಬುದು ನಮ್ಮ ನಂಬಿಕೆ. ನಾನು ಸ್ಥಳೀಯವಾಗಿ ಓಡಾಟ ಮಾಡಿದ್ದೇನೆ. ಬಿಜೆಪಿ ಪ್ರತಿ ಕ್ಷೇತ್ರದಲ್ಲಿ ಎಷ್ಟೇ ದುಡ್ಡು ಸುರಿಸಿರಬಹುದು, ಎಷ್ಟೇ ದೊಡ್ಡ ನಾಯಕರು ಬಂದು ಪ್ರಚಾರ ಮಾಡಿರಬಹುದು. ಆದರೆ, ಮತ ಎಂಬುದು ಬುಲೆಟ್ ಗಿಂತ ಶಕ್ತಿಶಾಲಿಯಾಗಿದೆ.

ಈ ದೇಶಕ್ಕೆ ಸ್ವಾತಂತ್ರ್ಯ ತಂದು ಕೊಡಲು ಹೇಗೆ ಜನ ಬ್ರಿಟೀಷರ ಗುಂಡಿಗೆ ಹೆದರಲಿಲ್ಲವೋ, ಅದೇ ರೀತಿ ಜನ ಡಬಲ್ ಇಂಜಿನ್ ಸರ್ಕಾರ, ದುರಾಡಳಿತ, ಸಾಂವಿಧಾನಿಕ ಸಂಸ್ಥೆಗಳ ದುರುಪಯೋಗ ಮಾಡಿಕೊಂಡಿದ್ದರು. ಜನ ತಮ್ಮ ನಿರ್ಧಾರ ಬದಲಿಸುವುದಿಲ್ಲ ಎಂದು ಹೇಳಿದರು.

ಅತಂತ್ರ ವಿಧಾನಸಭೆ ನಿರ್ಮಾಣವಾಗಬಹುದು ಎಂಬ ಕಾರಣಕ್ಕೆ ತೆರೆಮರೆಯಲ್ಲಿ ಪ್ರಯತ್ನ ನಡೆಯುತ್ತಿದ್ದು, ಕುಮಾರಸ್ವಾಮಿ ಅವರು ಸಿಂಗಾಪುರಕ್ಕೆ ಹೋಗುವ ಮುನ್ನ ನಾನು ಮೈತ್ರಿಗೆ ಸಿದ್ಧ ಎಂಬ ಹೇಳಿಕೆ ಬಗ್ಗೆ ಕೇಳಿದಾಗ, ಯಾವ ತೆರೆಮರೆ ಪ್ರಯತ್ನವೂ ಇಲ್ಲ. ಇಷ್ಟು ದಿನ ಅವರು ತಮಗೆ ಬಹುಮತ ಬರಲಿದೆ ಎಂದು ಹೇಳುತ್ತಿದ್ದರು. ಅವರು ಯಾರ ಜತೆ ಮೈತ್ರಿ ಮಾಡಿಕೊಳ್ಳಲು ಸಿದ್ಧವೋ ಗೊತ್ತಿಲ್ಲ ಎಂದು ತಿಳಿಸಿದರು.

ಕುಮಾರಸ್ವಾಮಿ ಅವರು ಚುನಾವಣೆಗೂ ಮುನ್ನ ಬಹುಮತ ಬಾರದಿದ್ದರೆ ಪಕ್ಷ ವಿಸರ್ಜನೆ ಮಾಡುತ್ತೇವೆ ಎಂದು ಹೇಳುತ್ತಿದ್ದರು ಎಂದು ಕೇಳಿದಾಗ, ಕುಮಾರಣ್ಣ ಅವರು ಯಾವ ಲೆಕ್ಕಾಚಾರದಲ್ಲಿ ಹೇಳಿದ್ದಾರೋ ಗೊತ್ತಿಲ್ಲ. ನಾವಂತೂ ಆರೋಗ್ಯ ಉತ್ತಮವಾಗಿ ಇರುವವರೆಗೂ ನಿವೃತ್ತಿ ಪಡೆಯುವುದಿಲ್ಲ. ದಳದ ಕಾರ್ಯಕರ್ತರು ಸಮಯ ವ್ಯರ್ಥ ಮಾಡದೆ ನಮ್ಮ ಜತೆ ಸೇರಿಕೊಳ್ಳಲಿ ಎಂದು ಹೇಳಿದ್ದೇನೆ. ಇಂದು ಅದನ್ನೆ ಹೇಳುತ್ತೇನೆ ಎಂದು ತಿಳಿಸಿದರು.

# ಮಳೆ ಕೃಪೆಗಾಗಿ ಹನುಮನಹಳ್ಳಿ ಮಾರಮ್ಮ, ಗುಳ್ಳಮ್ಮನ ಉತ್ಸವ



ಸಾಸ್ವೆಹಳ್ಳಿ, ಮೇ 12- ಮಳೆಗಾಲಕ್ಕೂ ಮುನ್ನ ಬಿಸಿಲ ಝಳಕ್ಕೆ ಹಲವು ಕಾಯಿಲೆಗಳು ಹೆಚ್ಚಾಗುತ್ತವೆ. ಉತ್ತಮ ಮಳೆ ಬಂದು ಫಸಲು ಸೊಂಪಾಗಿ ಬೆಳೆಯಲಿ, ಇಳುವರಿ ಸಂಮೃದ್ಧಿಯಾಗಲಿ ಎಂಬ ಉದ್ದೇಶದಿಂದ ಗ್ರಾಮದಲ್ಲಿ ಮಾರಮ್ಮ ಮತ್ತು ಗುಳ್ಳಮ್ಮ ದೇವಿಯ ಉತ್ಸವ ಮೂರ್ತಿಗಳನ್ನು ಪೂಜಿಸಿ, ಮೆರವಣಿಗೆ ಮಾಡಿದರು.

ಮಾರಮ್ಮನ ತವರು ಮನೆ ಹನುಮನಹಳ್ಳಿ, ಗಂಡನ ಮನೆ ಮರಿಗೊಂಡನಹಳ್ಳಿಯಾಗಿದೆ. ಅಮ್ಮನನ್ನು ತವರು ಮನೆಯವರು ವರ್ಷಕ್ಕೊಮ್ಮೆ ಕರೆತಂದು ಸೀರೆ, ಉಡಕ್ಕಿ, ಎಡೆ ನೀಡಿ ಸಂತೃಪ್ತಿಗೊಳಿಸಿ, ಪೂಜಿಸಿ, ಗ್ರಾಮವನ್ನು ಕಾಪಾಡುವಂತೆ ಬೇಡಿಕೊಳ್ಳುವುದು ವಾಡಿಕೆ. ಅದರಂತೆ ಈ ಬಾರಿ ಗ್ರಾಮ ದೇವತೆ ಗುಳ್ಳಮ್ಮ ಹಾಗೂ ಮಾರಮ್ಮ ದೇವತೆಗಳನ್ನು ಪೂಜಿಸಿ ಶುಕ್ರವಾರ ಗಡಿ ದಾಟಿಸಿ ಬಂದರು.

ಈ ಮೂಲಕ ಗ್ರಾಮಕ್ಕೆ ಅಂಟಿರುವ ಕಷ್ಟಗಳು ಬಗೆಹರಿಯುತ್ತವೆ ಎಂಬ ನಂಬಿಕೆ ಜನರಲ್ಲಿದೆ ಎನ್ನುತ್ತಾರೆ ಗ್ರಾಮದ ಪಾರ್ವತಮ್ಮ.

## ವಕೀಲರ ನೋಂದಣಿ ಶುಲ್ಕ 600 ರೂ. ದಾಟುವಂತಿಲ್ಲ

ನವದೆಹಲಿ, ಮೇ 12 – ರಾಜ್ಯ ವಕೀಲರ ಒಕ್ಕೂಟಗಳು 600 ರೂ.ಗಳಿಗಿಂತ ಹೆಚ್ಚಿನ ನೋಂದಣಿ ಶುಲ್ಕ ಪಡೆಯುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ.

ವಕೀಲರ ಕಾಯ್ದೆಯ ಅನ್ವಯ ಯಾವುದೇ ರಾಜ್ಯ ಒಕ್ಕೂಟ ವಕೀಲರಾಗಿ ನೋಂದಾಯಿಸಿಕೊಳ್ಳಲು 600 ರೂ.ಗಳಿಗಿಂತ ಹೆಚ್ಚಿನ ಶುಲ್ಕ ಪಡೆಯುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

1993ರಲ್ಲಿ ಈ ಶುಲ್ಕ ನಿಗದಿ ಪಡಿಸಲಾಗಿತ್ತು. ನಂತರ ಸಾಕಷ್ಟು ಹಣದುಬ್ಬರವಾಗಿರುವ ಹಿನ್ನೆಲೆಯಲ್ಲಿ ಶುಲ್ಕ ಹೆಚ್ಚಳಕ್ಕೆ ಅವಕಾಶ ಇರಬೇಕು ಎಂಬ ವಾದವನ್ನು ನ್ಯಾಯಾಲಯ ತಳ್ಳಿ ಹಾಕಿದೆ.

# ಆರ್ಯನ್ ಖಾನ್ ವಿರುದ್ಧ ಪ್ರಕರಣ ದಾಖಲಿಸದೇ ಇರುವುದಕ್ಕೆ ಲಂಚ

**ವಾಂಖೆಡೆ ವಿರುದ್ಧ ಸಿ.ಬಿ.ಐ. ಪ್ರಕರಣ**

ನವದೆಹಲಿ, ಮೇ 12 - ಚಿತ್ರನಟ ಶಾರುಕ್ ಖಾನ್ ಅವರ ಪುತ್ರ ಆರ್ಯನ್ ಖಾನ್ ವಿರುದ್ಧ ಮಾದಕ ಪ್ರಕರಣ ದಾಖಲಿಸದೇ ಇರಲು 25 ಕೋಟಿ ರೂ. ಲಂಚ ಕೇಳಿದ ಆರೋಪದ ಮೇಲೆ ಎನ್.ಸಿ.ಬಿ. ಮಾಜಿ ಅಧಿಕಾರಿ ಸಮೀರ್ ವಾಂಖೆಡೆ ವಿರುದ್ಧ ಸಿ.ಬಿ.ಐ. ಪ್ರಕರಣ ದಾಖಲಿಸಿದೆ.

2021ರ ಅಕ್ಟೋಬರ್ 2ರಂದು ಕಾರ್ಡಿಲಿಯಾ ಕ್ರೂಸ್ ಹಡಗಿನಲ್ಲಿ ಮಾದಕ ಪ್ರಕರಣ ನಡೆದಿದೆ ಎಂದು ಆರ್ಯನ್ ಖಾನ್‌ರನ್ನು ಬಂಧಿಸಲಾಗಿತ್ತು.

ನಂತರ ಎನ್.ಸಿ.ಬಿ. (ಮಾದಕ ನಿಗ್ರಹ ದಳ) ಪ್ರಕರಣ ದಾಖಲಿಸಿತ್ತು. ಪ್ರಕರಣದಿಂದ ಆರ್ಯನ್ ಖಾನ್ ದೋಷಮುಕ್ತರಾಗಿದ್ದರು. ವಾಂಖೆಡೆ ನೇತೃತ್ವದಲ್ಲಿ ನಡೆದ ತನಿಖೆಯಲ್ಲಿ ಲೋಪಗಳಿದ್ದವು ಎಂಬ ಆರೋಪದ ನಂತರ ಈ ಬಗ್ಗೆ ವಿಶೇಷ ತನಿಖಾ ತಂಡ ರಚಿಸಲಾಗಿತ್ತು.

ತಂಡವು ಮುಂಬೈ, ದೆಹಲಿ, ರಾಂಚಿ ಹಾಗೂ ಕಾನ್‌ಪುರ ಸೇರಿದಂತೆ 29 ಕಡೆಗಳಲ್ಲಿ ಶೋಧ ನಡೆಸಿತ್ತು.

ಆರ್ಯನ್ ಖಾನ್ ವಿರುದ್ಧ ಪ್ರಕರಣ ದಾಖಲಿಸದೇ ಇರಲು ಅಧಿಕಾರಿ ವಾಂಖೆಡೆ ಮತ್ತಿತರರು 25 ಕೋಟಿ ರೂ. ಲಂಚ ಪಡೆದಿದ್ದಾರೆ ಎಂದು ಆರೋಪಿಸಲಾಗಿತ್ತು. ಅಧಿಕಾರಿ ಹಾಗೂ ಸಹಚರರು ಮುಂಗಡವಾಗಿ 50 ಲಕ್ಷ ರೂ. ಪಡೆದಿದ್ದಾರೆ ಎಂದು ಸಿ.ಬಿ.ಐ.ಗೆ ಮಾಹಿತಿ ದೊರೆತಿತ್ತು.

ಆರ್ಯನ್ ಖಾನ್ ಬಂಧನವಾದಾಗ ವಾಂಖೆಡೆ ಮುಂಬೈನ ಮಾದಕ ನಿಗ್ರಹದ ದಳದ ಮುಖ್ಯಸ್ಥರಾಗಿದ್ದರು. ನಂತರ ಅವರನ್ನು ಚೆನ್ನೈನ ತೆರಿಗೆದಾರರ ಸೇವೆಗಳ ಪ್ರಧಾನ ನಿರ್ದೇಶನಾಲಯಕ್ಕೆ ವರ್ಗಾಯಿಸಲಾಗಿತ್ತು.

## ಕೇಂದ್ರದಿಂದ ಹೊಸ ಮಾದರಿ ಬಂಧೀಖಾನೆ ಕಾಯ್ದೆ

ನವದೆಹಲಿ, ಮೇ 12 – ಬ್ರಿಟಿಷರ ಕಾಲದಲ್ಲಿ ರೂಪಿಸಲಾಗಿದ್ದ 130 ವರ್ಷಗಳ ಹಳೆಯ ಕಾಯ್ದೆಯನ್ನು ಬದಲಿಸಲು ಕೇಂದ್ರ ಸರ್ಕಾರ ಮಾದರಿ ಬಂಧೀಖಾನೆ ಕಾಯ್ದೆಯನ್ನು ರೂಪಿಸಿದೆ. ಖೈದಿಗಳ ಸುಧಾರಣೆ ಹಾಗೂ ಪುನರ್ವಸತಿ ಕಡೆ ಹೆಚ್ಚು ಒತ್ತು ನೀಡಲು ಹೊಸ ಮಾದರಿ ಕಾಯ್ದೆ ರೂಪಿಸಲಾಗಿದೆ.

ಜೈಲು ಆವರಣದಲ್ಲಿ ಅಕ್ರಮವಾಗಿ ಮೊಬೈಲ್ ಇತ್ಯಾದಿ ಬಳಸಿದ ಸಂದರ್ಭದಲ್ಲಿ ಖೈದಿಗಳು ಹಾಗೂ ಜೈಲು ಸಿಬ್ಬಂದಿಗೆ ಶಿಕ್ಷೆ ವಿಧಿಸಲು ಈ ಮಾದರಿ ಕಾಯ್ದೆಯಲ್ಲಿ ಪ್ರಸ್ತಾಪವಿದೆ. ಪೆರೋಲ್ ಹಾಗೂ ಅವಧಿಗೆ ಮುಂಚೆ ಬಿಡುಗಡೆ ಪಡೆಯಲು ಖೈದಿಗಳಿಗೆ ಕಾನೂನು ನೆರವು ನೀಡಲಾಗುವುದು ಎಂದು ಕೇಂದ್ರ ಗೃಹ ಸಚಿವಾಲಯ ತಿಳಿಸಿದೆ.

ದೇಶದ ಬಂಧೀಖಾನೆಗಳು ರಾಜ್ಯಗಳಿಗೆ ಸಂಬಂಧಿಸಿದ ವಿಷಯ. ಹೀಗಾಗಿ ಕೇಂದ್ರ ಸರ್ಕಾರ ಮಾದರಿ ಕಾಯ್ದೆಯನ್ನು ರೂಪಿಸಿದೆ. ಪ್ರಸಕ್ತ 1894ರಲ್ಲಿ ರೂಪಿಸಲಾದ ಬಂಧೀಖಾನೆ ಕಾಯ್ದೆ ಜಾರಿಯಲ್ಲಿದೆ.


**ಅಡಿಗೆಯವರು ಬೇಕಾಗಿದ್ದಾರೆ**
ದಾವಣಗೆರೆ ಮನೆಯಲ್ಲಿ ಅಡುಗೆ ಕೆಲಸ ಮಾಡಲು ಬೇಕಾಗಿದ್ದಾರೆ.
(Veg / Non-Veg)
ಆಸಕ್ತರು ಸಂಪರ್ಕಿಸಿ.
99644 14174

**ಸೈಟುಗಳು ಮತ್ತು ಮನೆಗಳು**
33x50 ಪೂರ್ವ ಸಿದ್ದವೀರಪ್ಪ ಬಡಾವಣೆ 20x60 ಉತ್ತರ, ಎಂಸಿಸಿ ಬಿ ಬ್ಲಾಕ್, 20x60 ಪಶ್ಚಿಮ ವಿದ್ಯಾನಗರ, 40x50 ಪೂರ್ವ ಮಹಾಲಕ್ಷ್ಮಿ ಬಡಾವಣೆ.
ಏಜೆಂಟ್ : ಎಸ್.ಯಲ್ಲೋಜಿರಾವ್
97418 11694

**ಶಿಕ್ಷಕಿಯರು ಬೇಕಾಗಿದ್ದಾರೆ**
ಹುದ್ದೆಗಳ ಸಂಖ್ಯೆ
1) BSc/BCom/NTC (Maths): 02
ನಿಸರ್ಗ ಕಾನ್ವೆಂಟ್
ಹೆಚ್‌ಕೆಆರ್ ಸರ್ಕಲ್ ಹತ್ತಿರ, ನಿಟ್ಟುವಳ್ಳಿ ದಾವಣಗೆರೆ. ಮಾಹಿತಿಗಾಗಿ ಸಂಪರ್ಕಿಸಿ:
767-649-4295, 98444 43374

**ಮಳಿಗೆ ಬಾಡಿಗೆಗಿದೆ**
ಮೊದಲನೇ ಮಹಡಿಯಲ್ಲಿ 11x22 (250) ಅಡಿವುಳ್ಳ ಪ್ರೈಮ್ ಲೊಕೇಶನ್ ವಿದ್ಯಾನಗರ ಮೇನ್ ರೋಡ್, 1ನೇ ಬಸ್ ಸ್ಟಾಪ್ ಹತ್ತರ ಕಾಫಿ ಡೇ ಆಫೀಸ್ ಪಕ್ಕ, ಬ್ಯೂಟಿ ಪಾರ್ಲರ್‌ಗೆ ಸೂಕ್ತವಾಗಿರುವ ಮಳಿಗೆ ಬಾಡಿಗೆಗಿದೆ. ಸಂಪರ್ಕಿಸಿ :
99725 77991, 91486 52424

**FOR RENT**
First Floor MCC 'B' Block Boys Hostel Road,
82177 72482

**ಬೇಕಾಗಿದ್ದಾರೆ**
GNM/ANM ಆಯಾ, ವಾರ್ಡ್ ಬಾಯ್, ಮ್ಯಾನೇಜರ್, ರಿಸೆಪ್ಷನಿಸ್ಟ್ ಬೇಕಾಗಿದ್ದಾರೆ.
84312 74911

**WANTED**
Banking Sector Tele Caller
(Female Only)
Qualification : Any Degree
90715 55081
Interview time : 11AM

**ಸೈಟು ಮಾರಾಟಕ್ಕಿವೆ**
ಬಾತಿ ಹತ್ತಿರ, ಅನ್ನಪೂರ್ಣ ಎನ್‌ಕ್ಲೇವ್, (30x40) ಉತ್ತರ-ದಕ್ಷಿಣ ರೂ. 1599/-
70196 18397

**ಉತ್ತಮ ಅಡಿಕೆ ಸಸಿಗಳು ಮಾರಾಟಕ್ಕಿವೆ**
ನಮ್ಮಲ್ಲಿ ಉತ್ತಮವಾದ ಅಡಿಕೆ ಸಸಿಗಳು ಮಾರಾಟಕ್ಕಿವೆ. ಸ್ಥಳ : ದೊಡ್ಡಬಾತಿ
88920 08800

**ಸೊಳ್ಳೆ ಮೆಶ್ ಹಾಕಲಾಗುವುದು**
ನಮ್ಮಲ್ಲಿ ಎಲ್ಲಾ ತರಹದ ಕುಷನ್ ವರ್ಕ್ಸ್, ಸೋಫಾ ಸೆಟ್, Duroflex Bed, ಕಿಟಕಿಗೆ ಅಲ್ಯುಮಿನಿಯಂ ಡೋರ್, ಸೊಳ್ಳೆ ಮೆಶ್ ಹಾಕಲಾಗುವುದು.
Swapna Cushion Work
Behind Vittal Temple, Maharaj Pet, Davanagere
98445 81966

**URGENT REQUIREMENT**
Telecallers
only for ladies
93535 28242
81054 71803

**ಶಿಕ್ಷಕ/ಶಿಕ್ಷಕಿಯರು ಬೇಕಾಗಿದ್ದಾರೆ**
ಹುದ್ದೆಗಳ ಸಂಖ್ಯೆ : 1) B.Sc B.Ed (PM):01, 2) B.Sc :01
ನಿಸರ್ಗ ಪ್ರಾಥಮಿಕ ಹಾಗೂ ಪ್ರೌಢಶಾಲೆ
'ಸಿ' ಬ್ಲಾಕ್, SOG ಬಡಾವಣೆ, ಇಂಡಸ್ಟ್ರಿಯಲ್ ಏರಿಯಾ, ದಾವಣಗೆರೆ.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :
87927 02690, 98444 43374

**ಬೇಕಾಗಿದ್ದಾರೆ**
ಪಾರ್ಟ್ ಟೈಂ ಜಾಬ್, ನಿಮ್ಮ ಮನೆಯಿಂದಲೇ ಬಿಡುವಿನ ವೇಳೆಯಲ್ಲಿ ದಿನದಲ್ಲಿ 2 ಗಂಟೆ ಟೆಲಿಕಾಲಿಂಗ್ ಕೆಲಸ ನಿರ್ವಹಿಸಿ ತಿಂಗಳಿಗೆ 10,000/- ದಿಂದ 15000/- ಸಂಪಾದಿಸಿ.
89714 63581, 81055 03664

**ಟೆಲಿ ಕಾಲಿಂಗ್**
ಟೆಲಿ ಕಾಲಿಂಗ್ ಕೆಲಸ ಮಾಡಲು ಅನುಭವವುಳ್ಳ, ಮಹಿಳೆಯರು ಬೇಕಾಗಿದ್ದಾರೆ.
ವಯೋಮಿತಿ-20 ರಿಂದ 30 ವರ್ಷ ಒಳಗೆ
ಸುವೀ ಇಂಡಸ್ಟ್ರೀಸ್
ಕರೂರು ಇಂಡಸ್ಟ್ರೀಯಲ್ ಏರಿಯಾ, ದಾವಣಗೆರೆ.
96206 38679

**HOUSE FOR RENT**
# 916, Nijalingappa Badavane, 1st main, 4th Cross, Davangere. near Amrutha Vidyalaya, School Nijalingappa Badavane, DVG.,
9380040368, 8296469527

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**
ಶೀಘ್ರ, ಸ್ವಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ವೀರ್ಯಾಣು ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.

ದಾವಣಗೆರೆ: 2 & 3ರಂದು ಬಸವರಾಜ ಲಾಡ್ಜ ಪಿ.ಬಿ. ರಸ್ತೆ.
ಡಾ|| ಎಸ್.ಆಯ್. ದೊಡ್ಡಮನಿ
ದುರ್ಗಾದೇವಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್‌ಸ್ಟ್ಯಾಂಡ ಎದುರಿಗೆ, ಹುಬ್ಬಳ್ಳಿ
M:9740523710

**ಮನೆ ಮಾರಾಟಕ್ಕಿದೆ**
2 BHK ನೆಲ ಮಹಡಿ, 30x40 ವಿಸ್ತೀರ್ಣ ಮನೆ ಬೋರ್ ವೆಲ್ ನೀರಿನ ವ್ಯವಸ್ಥೆ ಇರುವ ಮನೆ ಮಾರಾಟಕ್ಕಿದೆ. ಶ್ರೀ ಶಿರಡಿ ಸಾಯಿಬಾಬಾ ದೇವಸ್ಥಾನ ಹತ್ತಿರ, ಹೈಟೆಕ್ ಆಸ್ಪತ್ರೆ ರೋಡ್, ಜಯನಗರ, ದಾವಣಗೆರೆ.
94803 74202
94482 43349

**ವಿಕಾಸ್ ಸ್ಪೋಕನ್ ಇಂಗ್ಲಿಷ್ & ಕಂಪ್ಯೂಟರ್ ಕ್ಲಾಸಸ್**
33 ದಿನಗಳಲ್ಲಿ ಕಲಿಯಿರಿ.
ಕಲಿಯದಿದ್ದರೆ ಹಣ ವಾಪಸ್
Contact :
93802 29199
ದಾವಣಗೆರೆ, ಹರಿಹರ

**HOUSE FOR LEASE**
Independent house, 3 BHK 5th main, 5th cross, St. Pauls Convent Road, PJ extension, Davangere.
88616 89590

**ಇಲಾಖಾ ಪರೀಕ್ಷೆಗೆ ಹಾಜರಾಗುವ ಸರ್ಕಾರಿ ನೌಕರರ ಗಮನಕ್ಕೆ**
ಜೂನ್ 2023ರಲ್ಲಿ ನಡೆಯುವ ಅಕೌಂಟ್ಸ್ ಲೋಯರ್ ಮತ್ತು ಹೈಯರ್ ಇಲಾಖಾ ಪರೀಕ್ಷೆಗಳಿಗೆ ಕೋಚಿಂಗ್ ಶಿಬಿರವನ್ನು 15.5.2023ರಿಂದ ಪ್ರಾರಂಭಿಸಲಾಗುವುದು. ತರಬೇತಿಯ ಪಡೆಯಲಿಚ್ಛಿಸುವ ನೌಕರರು ಕೆಳಕಂಡ ದೂರವಾಣಿ ಮೂಲಕ ಸಂಪರ್ಕಿಸಿ. ಹೆಸರು ನೋಂದಾಯಿಸಿಕೊಳ್ಳುವುದು.
ಎಂ.ಬಿ ಬಸವರಾಜ್ : 98452 84348

**ಮಾಂತ್ರಿಕ ಮೋಡಿ ಬೆಟ್ಟಪ್ಪ**
ನಂ.1 ವಶೀಕರಣ ಸ್ಪೆಷಲಿಸ್ಟ್
ನೀವು ಇಷ್ಟಪಟ್ಟವರು ನಿಮ್ಮಂತಾಗಲು ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ನಿಮ್ಮ ಯಾವುದೇ ಸಮಸ್ಯೆಗಳನ್ನು 100% ಪರಿಹಾರ ಮಾಡುತ್ತಾರೆ.
ಗಾಂಧಿ ಸರ್ಕಲ್, ದಾವಣಗೆರೆ.
89716 99826

**Tuition for Supplementary exam SSLC & PUC**
100% ಫಲಿತಾಂಶ
ಸಿಂಚನ ಕೋಚಿಂಗ್ ಸೆಂಟರ್, ದಾವಣಗೆರೆ
8861445913 8553278258

**ಮನೆ ಬಾಡಿಗೆಗಿದೆ**
ದೇವರಾಜ್ ಅರಸ್ 'A' ಬ್ಲಾಕ್‌ನಲ್ಲಿ, ಮೊದಲನೇ ಮಹಡಿಯಲ್ಲಿ, ಡಬಲ್ ಬೆಡ್ ರೂಂ ಮನೆಯಿದ್ದು ಎಲ್ಲಾ ಸೌಕರ್ಯಗಳನ್ನು ಹೊಂದಿರುವ ಮನೆ ಬಾಡಿಗೆಗಿದೆ. ಸಸ್ಯಹಾರಿಗಳಿಗೆ ಆದ್ಯತೆ. ಬ್ರೋಕರ್‌ಗೆ ಅವಕಾಶವಿಲ್ಲ ಆಸಕ್ತರು ಸಂಪರ್ಕಿಸಿ :
98459 24394

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: SSLC/PUC/ITI ಪಾಸ್/ಫೇಲ್
ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ವಿದ್ಯಾರ್ಥಿಗಳಿಗೆ ಉಚಿತ ಯೂನಿಫಾರ್ಮ್ ನೀಡಲಾಗುವುದು
ಶ್ರೀ ಗಂಗೋತ್ರಿ ಕಮ್ಯೂನಿಟಿ ಕಾಲೇಜ್
ಲಾಯರ್ ರೋಡ್, ದಾವಣಗೆರೆ.
86602 35013

**ಮನೆಗಳು ಬಾಡಿಗೆಗಿವೆ**
2BHK ಮನೆಗಳು ಬಾಡಿಗೆಗಿವೆ.
2ನೇ ಮಹಡಿ, 1ನೇ ಕ್ರಾಸ್, 1ನೇ ಮೇನ್, ಶಂಕರ್ ವಿಹಾರ್ ಲೇಔಟ್, ದಾವಣಗೆರೆ.
76763 62614

**2 BHK ಮನೆ ಬಾಡಿಗೆಗಿದೆ**
ಮೊದಲನೆ ಮಹಡಿಯಲ್ಲಿ 2 BHK ಮನೆ ಬಾಡಿಗೆಗೆ ಇದೆ, 2 ನೇ ಮುಖ್ಯ ರಸ್ತೆ, ಕೆ.ಬಿ. ಬಡಾವಣೆ, ಜೈನ್ ಮಂದಿರದ ಹತ್ತಿರ, ದಾವಣಗೆರೆ.
70198 96845

**ಬೇಕಾಗಿದ್ದಾರೆ**
ರೆಡಿಮೇಡ್ ಬಟ್ಟೆ ಅಂಗಡಿಯಲ್ಲಿ 3 ರಿಂದ 4 ವರ್ಷ ಅನುಭವವುಳ್ಳ ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.
ಸಂಬಳ - 8000 ರಿಂದ 10,000
ಶ್ರೀ ಗಣೇಶ್ ಹೊಸೈರಿ ಮಾರ್ಟ್
19. ಮಹಿಳಾ ಸಮಾಜ ಕಾಂಪ್ಲೆಕ್ಸ್, ಅಶೋಕ ರಸ್ತೆ, ದಾವಣಗೆರೆ.
94482 07473

**WANTED**
Teachers For School
Subject : Mathematicus, Sicence, English, Physical Education (PE Teacher)
Qualification : BSc., B.Ed., English Literature, Physical fitness
89714 02288

**ತಕ್ಷಣ ಬೇಕಾಗಿದ್ದಾರೆ**
5th, 7th, 9th,10th, PUC, Degree ITI, Diploma ಯುವಕ-ಯುವತಿಯರು MNC ಕಂಪನಿಗಳಿಗೆ, ಆಫೀಸ್‌ಗಳಿಗೆ, ಶೋ ರೂಂಗಳಿಗೆ, ಬಿಗ್ ಬಜಾರ್ಸ್‌ಗಳಿಗೆ ನೇರನೇಮಕಾತಿ ಸಂಬಳ 17,100/-, 56,000/- ವಸತಿ, ಊಟವಿದೆ.
96862 20858

# ಅತಂತ್ರ ಕುತೂಹಲಕ್ಕೆ ಇಂದು ತೆರೆ

## ಮಧ್ಯಾಹ್ನದ ವೇಳೆಗೆ ರಾಜ್ಯದ 2615 ಅಭ್ಯರ್ಥಿಗಳ ಭವಿಷ್ಯ ಬಹಿರಂಗ

ಬೆಂಗಳೂರು, ಮೇ 12- ಸ್ಪಷ್ಟ ಬಹುಮತವೋ ಇಲ್ಲವೇ ಅತಂತ್ರ ವಿಧಾನಸಭೆಯೋ ಎಂಬ ಕುತೂಹಲಕ್ಕೆ ಶನಿವಾರ ತೆರೆ ಬೀಳಲಿದೆ.

ಇಡೀ ದೇಶದ ಗಮನ ಸೆಳೆದಿರುವ ಹಾಗೂ ತೀವ್ರ ಕುತೂಹಲ ಕೆರಳಿಸಿರುವ ಕರ್ನಾಟಕ 16ನೇ ವಿಧಾನಸಭೆ ಚುನಾವಣೆಗೆ ಮತದಾರರು ನೀಡಿರುವ ಜನಾದೇಶ ಶನಿವಾರ ಪ್ರಕಟವಾಗಲಿದೆ.

ಮೇ 10 ರಂದು ರಾಜ್ಯದ 224 ವಿಧಾನಸಭಾ ಕ್ಷೇತ್ರಗಳಿಗೆ ನಡೆದ ಚುನಾವಣೆಯ ಮತ ಎಣಿಕೆ ಶನಿವಾರ ಬೆಳಿಗ್ಗೆ 8 ಗಂಟೆಯಿಂದ ಆರಂಭಗೊಳ್ಳಲಿದ್ದು, ಮಧ್ಯಾಹ್ನದ ವೇಳೆಗೆ ರಾಜಕೀಯ ಪಕ್ಷಗಳ ಹಣೆಬರಹ ಹೊರಬರಲಿದೆ.

ಮಹಾನಗರ ಪಾಲಿಕೆ ಮತ್ತು ಜಿಲ್ಲಾ ಕೇಂದ್ರಗಳಲ್ಲಿ ಏಕ ಕಾಲಕ್ಕೆ ಮತ ಎಣಿಕೆ ಆರಂಭಗೊಳ್ಳಲಿದ್ದು, ಮಧ್ಯಾಹ್ನದ ವೇಳೆಗೆ ಚುನಾಣಾ ಕಣದಲ್ಲಿರುವ 2615 ಅಭ್ಯರ್ಥಿಗಳ ಭವಿಷ್ಯ ಬಹಿರಂಗಗೊಳ್ಳಲಿದೆ.

ಮತದಾರರು ನೀಡಿರುವ ಭವಿಷ್ಯವನ್ನು ಚುನಾವಣಾ ಸಮೀಕ್ಷೆಗಳು ತಮ್ಮ ಇಚ್ಛಾಶಕ್ತಿಯಂತೆ ಬಹಿರಂಗ ಗೊಳಿಸಿರುವುದು ಸಾರ್ವಜನಿಕವಾಗಿ ಹಾಗೂ ರಾಜಕೀಯವಾಗಿ ಭಾರೀ ಗೊಂದಲವನ್ನುಂಟು ಮಾಡಿದೆ.

ಇದರ ಆಧಾರದ ಮೇಲೆ ರಾಜಕೀಯ ಪಕ್ಷಗಳು ಅಧಿಕಾರದ ಚುಕ್ಕಾಣಿ ಹಿಡಿಯಲು ಕಾತರಿಸುತ್ತಿದ್ದು, ತಮ್ಮ ಮುಖಂಡರು ಗರಿ ಬಟ್ಟೆ ಧರಿಸುವ ಕನಸು ಕಂಡಿದ್ದಾರೆ.

ಸಮೀಕ್ಷೆಗಳ ವರದಿ ಆಧಾರದ ಮೇಲೆ ಈಗಾಗಲೇ ಏಕ ಪಕ್ಷಕ್ಕೆ ಅಧಿಕಾರ ದೊರೆಯಲಿದೆ ಎಂದು ಕಾಂಗ್ರೆಸ್ ಸಿದ್ಧತೆ ಮಾಡಿಕೊಂಡಿದೆ.

ಸ್ವಲ್ಪ ಅನುಮಾನದಲ್ಲಿರುವ ಬಿಜೆಪಿ, ಜೆಡಿಎಸ್ ಜೊತೆಗೂಡಿ ಸರ್ಕಾರ ರಚಿಸುವ ಕಸರತ್ತು ನಡೆಸಿವೆ.

ಮುಖ್ಯಮಂತ್ರಿ ಗಾದಿಗೆ ಪೈಪೋಟಿ ನಡೆಸಿರುವ ಹಾಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಮಾಜಿ ಮುಖ್ಯಮಂತ್ರಿಗಳಾದ ಹೆಚ್.ಡಿ. ಕುಮಾರಸ್ವಾಮಿ, ಸಿದ್ದರಾಮಯ್ಯ ಅವರು ಮತ್ತೆ ಆ ಸ್ಥಾನದ ಕನಸು ಕಾಣುತ್ತಿದ್ದಾರೆ.

ಇದರ ಜೊತೆಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಮಾಜಿ ಅಧ್ಯಕ್ಷ ಡಾ.ಜಿ. ಪರಮೇಶ್ವರ್, ಹಾಲಿ ಸಚಿವರಾದ ವಿ. ಸೋಮಣ್ಣ ಹಾಗೂ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಅವರು ಅವಕಾಶ ದೊರೆಯುವ ನಿರೀಕ್ಷೆಯಲ್ಲಿದ್ದಾರೆ.

ಇವರ ಜತೆಗೆ ಘಟಾನುಘಟಿಗಳಾದ ಜಗದೀಶ್ ಶೆಟ್ಟರ್, ವಿ.ಮುನಿಯಪ್ಪ ಸೇರಿದಂತೆ ವಿವಿಧ ರಾಜಕೀಯ ಪಕ್ಷಗಳ 2615 ಅಭ್ಯರ್ಥಿಗಳು ಮತದಾರರು ನೀಡಿರುವ ತೀರ್ಪಿಗೆ ಕಾದಿದ್ದಾರೆ.

ಶನಿವಾರ ಮಧ್ಯಾಹ್ನದ ವೇಳೆಗೆ ಫಲಿತಾಂಶ ನೀಡಲು ಚುನಾವಣಾ ಆಯೋಗ ಸಕಲ ಸಿದ್ಧತೆ ಮಾಡಿಕೊಂಡಿದ್ದು, ವಿಧಾನಸಭಾ ಕ್ಷೇತ್ರದ ಮತದಾನದ ಸಂಖ್ಯೆಗೆ ಅನುಗುಣವಾಗಿ ಮತ ಎಣಿಕಾ ಮೇಜುಗಳನ್ನು ಅಳವಡಿಸಿದೆ.

ಇದರ ಉಸ್ತುವಾರಿ ಹೊಣೆಯನ್ನು ಪಾಲಿಕೆಯಲ್ಲಿ ಆಯುಕ್ತರಿಗೆ, ಜಿಲ್ಲೆಗಳಲ್ಲಿ ಚುನಾವಣಾ ಅಧಿಕಾರಿಗಳಾಗಿರುವ ಜಿಲ್ಲಾಧಿಕಾರಿಗಳಿಗೆ ವಹಿಸಲಾಗಿದೆ.

ಮತ ಎಣಿಕೆಯ ಸಂದರ್ಭದಲ್ಲಿ ಯಾವುದೇ ರೀತಿಯ ಅಹಿತಕರ ಘಟನೆಗಳು ಜರುಗದಂತೆ ಮತ ಎಣಿಕಾ ಕೇಂದ್ರಗಳ ಸುತ್ತ ಮುತ್ತ ನಿಷೇಧಾಜ್ಞೆ ಹೇರಲಾಗಿದೆ.

ಅಲ್ಲದೇ ಪ್ರತಿ ಕೇಂದ್ರಕ್ಕೂ ಐಪಿಎಸ್ ದರ್ಜೆಯ ಅಧಿಕಾರಿಗಳನ್ನು ಭದ್ರತೆಗಾಗಿ ನಿಯೋಜಿಸಲಾಗಿದೆ. ಮತ ಎಣಿಕೆಯ ಮೇಲೆ ನಿಗಾ ಇಡಲು ಆಯೋಗದ ವೀಕ್ಷಕರನ್ನು ನಿಯೋಜಿಸಲಾಗಿದೆ. ಬೆಂಗಳೂರಿನಲ್ಲಿ ನಾಲ್ಕು ಸೇರಿದಂತೆ ರಾಜ್ಯದಲ್ಲಿ 34 ಕೇಂದ್ರಗಳಲ್ಲಿ ಮತ ಎಣಿಕೆ ನಡೆಯಲಿದೆ. ಈ ಬಾರಿ ರಾಜ್ಯದಲ್ಲಿ ದಾಖಲೆ ಪ್ರಮಾಣದ ಮತದಾನವಾಗಿದೆ.

ಬಿಜೆಪಿ-224, ಕಾಂಗ್ರೆಸ್-223, ಜೆಡಿಎಸ್-207 ಸೇರಿಂತೆ ಬಿ.ಎಸ್.ಪಿ., ಸಿಪಿಐಎಂ, ಎಎಪಿ, ಸೇರಿದಂತೆ ವಿವಿಧ ರಾಜಕೀಯ ಪಕ್ಷಗಳ, ನೋಂದಾಯಿತ ಪಕ್ಷಗಳ ಹಾಗೂ ಸ್ವತಂತ್ರ ಅಭ್ಯರ್ಥಿಗಳು ಸ್ಪರ್ಧಿಸಿದ್ದರು.

## ಬಸಾಪುರದ ಶ್ರೀ ರೇವಣಸಿದ್ದೇಶ್ವರ ಪ್ರೌಢಶಾಲೆಗೆ ಶೇ. 100 ಫಲಿತಾಂಶ

ದಾವಣಗೆರೆ, ಮೇ 12- ಬಸಾಪುರದ ಶ್ರೀ ರೇವಣಸಿದ್ದೇಶ್ವರ ವಸತಿಯುತ ಪ್ರೌಢಶಾಲೆಯು 2022-23ನೇ ಶೈಕ್ಷಣಿಕ ಸಾಲಿನ ಎಸ್ಎಸ್ಎಲ್‌ಸಿ ವಾರ್ಷಿಕ ಪರೀಕ್ಷೆಯಲ್ಲಿ 100 ಕ್ಕೆ 100 ರಷ್ಟು ಫಲಿತಾಂಶ ಬಂದಿದೆ.

ಒಟ್ಟು 39 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, 3 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್ ಪಡೆದಿದ್ದಾರೆ. 35 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ 1 ವಿದ್ಯಾರ್ಥಿ ದ್ವಿತೀಯ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆ. ವಿಕಾಸ್ ಜೆ. 557 ಅಂಕ, ರೇಣುಕಾ ಜಿ. 555 ಅಂಕ, ನವ್ಯ ಎಸ್. 546 ಅಂಕ ಗಳಿಸಿದ್ದಾರೆ.

ಎಲ್ಲಾ ವಿದ್ಯಾರ್ಥಿಗಳನ್ನು ಸಂಸ್ಥೆಯ ಸಂಸ್ಥಾಪಕ ಎಂ.ಎಸ್. ನಾಗರಾಜ್ ಅಭಿನಂದಿಸಿದ್ದಾರೆ. ಶ್ರೀಮತಿ ನಾಗಮ್ಮ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರು, ಶಿಕ್ಷಕ ವೃಂದ ಹಾಗೂ ಶ್ರೀ ರೇವಣಸಿದ್ದೇಶ್ವರ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರು ಹಾಗೂ ಸಿಬ್ಬಂದಿ ವರ್ಗದವರು ವಿದ್ಯಾರ್ಥಿಗಳನ್ನು ಅಭಿನಂದಿಸಿದ್ದಾರೆ.

## ನಗರದಲ್ಲಿ ಇಂದು ಶಿವಗೋಷ್ಠಿ

ಶಿವಗೋಷ್ಠಿ ಸಮಿತಿ, ಶ್ರೀ ಶಿವಕುಮಾರಸ್ವಾಮಿ ಮಹಾಮಂಟಪ ಹಾಗೂ ಸಾದರ ನೌಕರರ ಬಳಗ ಇವರುಗಳ ಸಹಯೋಗದಲ್ಲಿ ಇಂದು ಸಂಜೆ 6.30 ಕ್ಕೆ ತರಳಬಾಳು ಬಡಾವಣೆಯ ಶ್ರೀ ಶಿವಕುಮಾರಸ್ವಾಮಿ ಮಹಾಮಂಟಪದಲ್ಲಿ 'ಶಿವಗೋಷ್ಠಿ 295' - ಸ್ಮರಣೆ 67 ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಸಮಾರಂಭದ ಅಧ್ಯಕ್ಷತೆಯನ್ನು ಎಂ.ಬಿ. ಸಂಗಮೇಶ್ವರ ಗೌಡ್ರು ವಹಿಸಲಿದ್ದು, ಮುಖ್ಯ ಅತಿಥಿಯಾಗಿ ಬಿ.ಟಿ. ಪ್ರಕಾಶ್ ಆಗಮಿಸುವರು. 'ವಚನಗಳಲ್ಲಿ ಸಾಮಾಜಿಕ ಮೌಲ್ಯಗಳು' ವಿಷಯ ಕುರಿತು ಉಪನ್ಯಾಸ ನಡೆಯಲಿದೆ. ಲಿಂ. ಜಂತಿಕೊಳಲ ಸಿದ್ದಪ್ಪ, ಲಿಂ. ರುದ್ರಮ್ಮ ಇವರ ಸ್ಮರಣೆ ನಡೆಯಲಿದೆ. ಲಿಂಗೈಕ್ಯರ ಸ್ಮರಣೆಯನ್ನು ಎಸ್.ಆರ್. ಅಜ್ಜಪ್ಪ ನಡೆಸಿಕೊಡುವರು. ಕಾರ್ಯಕ್ರಮದಲ್ಲಿ ಕದಳಿ ಮಹಿಳಾ ವೇದಿಕೆಯಿಂದ ವಚನ ಗಾಯನ ನಡೆಯುವುದು.

ಜೆ.ಪಿ. ಶಕುಂತಲ, ಜೆ. ಪರಮೇಶ್ವರಪ್ಪ ದಾಸೋಹಿಗಳಾಗಿದ್ದಾರೆ. ಹೆಮ್ಮನಬೇತೂರಿನ ಶ್ರೀ ಸಿದ್ದೇಶ್ವರ ಪ್ರೌಢಶಾಲೆಯಿಂದ ನಿರ್ವಹಣೆ ನಡೆಯಲಿದೆ.

## ಸೇಂಟ್ ಜಾನ್ಸ್ ಇಂಗ್ಲಿಷ್ ಮೀಡಿಯಂ ಶಾಲೆಗೆ ಶೇ.99 ಫಲಿತಾಂಶ

ದಾವಣಗೆರೆ, ಮೇ 12- ನಗರದ ಸೇಂಟ್ ಜಾನ್ಸ್ ಇಂಗ್ಲೀಷ್ ಮೀಡಿಯಂ ಶಾಲೆಯು 2022-23 ನೇ ಸಾಲಿನ ಎಐಎಸ್‌ಎಸ್‌ಇ (ಸಿಬಿಎಸ್‌ಇ) ಪರೀಕ್ಷೆಯಲ್ಲಿ ಶೇ. 99 ರಷ್ಟು ಫಲಿತಾಂಶ ಪಡೆದಿದೆ. ಒಟ್ಟು 69 ವಿದ್ಯಾರ್ಥಿಗಳಲ್ಲಿ 9 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿ ಹಾಗೂ 46 ವಿದ್ಯಾರ್ಥಿಗಳು ಪ್ರಥಮ ದರ್ಜೆ ಪಡೆದಿದ್ದಾರೆ. ಕು. ಭೂಮಿಕ ಎಲ್. ಶೇ. 96ರಷ್ಟು ಫಲಿತಾಂಶ ಪಡೆದು ಶಾಲೆಗೆ ಪ್ರಥಮರಾಗಿ ಹೊರಹೊಮ್ಮಿದ್ದಾರೆ.

ಈ ಸಾಧನೆಗೆ ಆಡಳಿತ ಮಂಡಳಿಯವರು, ಪ್ರಾಂಶುಪಾಲರು, ಬೋಧಕ-ಬೋಧಕೇತರ ಸಿಬ್ಬಂದಿಯವರು ಅಭಿನಂದಿಸಿದ್ದಾರೆ.

## ಕವಯತ್ರಿ ಸಹನಾ ಅವರಿಗೆ ಸನ್ಮಾನ



ದಾವಣಗೆರೆ, ಮೇ 12- ಕಲಾಕುಂಚ ಸಾಂಸ್ಕೃತಿಕ ಸಂಸ್ಥೆ ಆಶ್ರಯದಲ್ಲಿ ನಡೆದ 'ಮತದಾನ ಜಾಗೃತಿ ಕವಿಗೋಷ್ಠಿ'ಯಲ್ಲಿ ಕವನ ವಾಚನ ಮಾಡಿದ ಹಾಸನ ಜಿಲ್ಲೆಯ ಅರಸೀಕೆರೆ ತಾಲ್ಲೂಕಿನ ಲಕ್ಷ್ಮೀಪುರದ ಯುವ ಪ್ರತಿಭೆ ಸಹನಾ ಅವರನ್ನು ಕಲಾಕುಂಚದಿಂದ ಸನ್ಮಾನಿಸಲಾಯಿತು.

ಬಿ.ಕಾಂ. ಪದವಿಯಲ್ಲಿ ರಾಜ್ಯ ಮಟ್ಟದ ಚಿನ್ನದಲ್ಲಿ ಪದಕ ಪಡೆದ ಸಹನಾ ಸ್ವಾತಂತ್ರ್ಯೋತ್ಸವ ಅಮೃತ ಮಹೋತ್ಸವದ ಕುರಿತು ರಾಷ್ಟ್ರಮಟ್ಟದ ಕವನ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನದೊಂದಿಗೆ ಒಂದು ಲಕ್ಷ ರೂ. ನಗದು ಪುರಸ್ಕಾರ ಪಡೆದಿದ್ದಾರೆ.

ಸಹನಾ ತಂದೆ ಭೈರೇಶ್ವರ ಮಂಜುನಾಥ್ ಶೇಟ್, ಸಾಲಿಗ್ರಾಮ ಗಣೇಶ್ ಶೆಣೈ, ಹಿರಿಯ ಪತ್ರಕರ್ತ ಬಿ.ಎನ್.ಮಲ್ಲೇಶ್, ಯುವ ಕವಿ ಡಾ. ಡಿ.ಫ್ರಾನ್ಸಿಸ್ ಕ್ಸೇವಿಯರ್, ಬಸವರಾಜ್ ಎಸ್.ಬಾಗೇವಾಡಿ ಮಠ, ಕಲಾಕುಂಚದ ಅಧ್ಯಕ್ಷ ಕೆ.ಹೆಚ್. ಮಂಜುನಾಥ್, ಮಹಿಳಾ ವಿಭಾಗದ ಅಧ್ಯಕ್ಷರಾದ ಹೇಮಾ ಶಾಂತಪ್ಪ ಪೂಜಾರಿ, ಪುಷ್ಪಾ ಮಂಜುನಾಥ್, ಶೈಲಾ, ವಿನೋದ್ ದೇವರಾಜ್ ಮುಂತಾದವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

## ಜೀವ ರಕ್ಷಣೆ ಪ್ರತಿಯೊಬ್ಬರ ಹೊಣೆ: ಹೆಲ್ಪ್‌ಲೈನ್ ಸುಭಾನ್



ದಾವಣಗೆರೆ, ಮೇ 12- ಜಗತ್ತಿನಲ್ಲಿ ಜೀವಿಸುತ್ತಿರುವ ಪ್ರತಿಯೊಂದು ಜೀವವು ಅಮೂಲ್ಯವಾದುದು. ಮನುಷ್ಯತ್ವದ ನೆಲೆಯಲ್ಲಿ ಸಕಲ ಜೀವಿಗಳನ್ನು ಕಾಣಬೇಕು. ಮಾನವೀಯತೆಯ ಗುಣಗಳನ್ನು ಮೈಗೂಡಿಸಿಕೊಂಡು ಅಪಘಾತ ಸಂದರ್ಭದಲ್ಲಿ ಜೀವ ರಕ್ಷಣೆ ಮಾಡುವುದು ಎಲ್ಲರ ಹೊಣೆಯಾಗಿದೆ ಎಂದು ಸಾಮಾಜಿಕ ಸೇವಾ ಕಾರ್ಯಕರ್ತ ಹೆಲ್ಪ್‌ಲೈನ್ ಸುಭಾನ್ ಹೇಳಿದರು.

ನಗರದ ಬಾಪೂಜಿ ವಿದ್ಯಾಸಂಸ್ಥೆಯ ಎ.ಆರ್.ಜಿ. ಕಲಾ ಮತ್ತು ವಾಣಿಜ್ಯ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ, ಎನ್‌ಸಿಸಿ, ಯುವ ರೆಡ್‌ಕ್ರಾಸ್ ಘಟಕ ಹಮ್ಮಿಕೊಂಡಿದ್ದ ಜೀವ ರಕ್ಷಣೆ ಕುರಿತ ಪ್ರಾತ್ಯಕ್ಷಿಕೆ ಮತ್ತು ಉಪನ್ಯಾಸ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಾಂಶುಪಾಲ ಡಾ.ಜಿ.ಬಿ. ಬೋರಯ್ಯ ಅಧ್ಯಕ್ಷತೆ ವಹಿಸಿದ್ದರು. ವಾಣಿಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಪ್ರೊ. ಅನಿತಕುಮಾರಿ, ಇತಿಹಾಸ ವಿಭಾಗದ ಮುಖ್ಯಸ್ಥ ಡಾ.ಜಿ.ಕೆ. ಮಲ್ಲಿಕಾರ್ಜುನಪ್ಪ, ಎನ್‌ಸಿಸಿ ಕಮಾಂಡರ್ ಪ್ರೊ. ರಶ್ಮಿ ರಮೇಶ್ ಪೂಜಾರ್, ಎನ್‌ಎಸ್‌ಎಸ್ ಯೋಜನಾಧಿಕಾರಿ ಡಾ.ಹೆಚ್.ಆರ್. ತಿಪ್ಪೇಸ್ವಾಮಿ, ಡಾ. ಚಮನ್‌ಸಾಬ್ ಮೊದಲಾದವರಿದ್ದರು.

### ಓದುಗರ ಪತ್ರ

## ಸಾವಯುವ ಕೃಷಿ ಮತ್ತು ಸಿರಿ ಧಾನ್ಯ

ಮಾನ್ಯರೇ,

ದೇಶದಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿ ಸ್ವದೇಶೀ ಕೃಷಿ ಪದ್ಧತಿಯು ಸ್ವಾಸ್ಥ ಪೂರ್ಣವಾಗಿತ್ತು, ಮಳೆಗಾಲವು ತೃಪ್ತಿಕರವಾಗಿತ್ತು ಅರಣ್ಯವು ಜನಸಂಖ್ಯೆಗೆ ಪೂರಕವಾಗಿದ್ದವು. ದೈಹಿಕ ಪರಿಶ್ರಮದ ಜನಜೀವನವು ಆರೋಗ್ಯದ ಬೆನ್ನೆಲುಬಾಗಿತ್ತು. ಸ್ವದೇಶೀ ನೀರಾವರಿ ಕೃಷಿಪದ್ಧತಿಯ ಪರಿಚಯಕ್ಕಿಂತಲೂ ಪೂರ್ವದಲ್ಲಿ ಸಾವಯುವ ಕೃಷಿ ಜನಪ್ರಿಯತೆ ಕಂಡಿತ್ತು.

ಈ ವರ್ಷವನ್ನು ಅಂತರಾಷ್ಟ್ರೀಯ ಸಿರಿ ಧಾನ್ಯಗಳ ವರ್ಷ ಎಂದು ಘೋಷಿಸಿರುವ ವಿಶ್ವ ಸಂಸ್ಥೆಯು, ಆಹಾರದಲ್ಲಿ ಸಿರಿ ಧಾನ್ಯಗಳ ಬಳಕೆಗೆ ಹೆಚ್ಚು ಒತ್ತು ನೀಡಿದೆ. ಮಳೆ ಆಶ್ರಿತ ಪ್ರದೇಶದಲ್ಲಿ ಬೆಳೆದ ಸಿರಿಧಾನ್ಯಗಳಿಂದ ಮನುಷ್ಯನಿಗೆ ಯಾವ ಕಾಯಿಲೆಯ ಬಾಧೆ ಇರುತ್ತಿರಲಿಲ್ಲ. ಸರ್ಕಾರಿ ರಸಗೊಬ್ಬರದಉತ್ಪಾದನೆಯ ಸ್ಥಾವರಗಳು ಆಗ ಇದ್ದಿಲ್ಲ, ಹೋಟೆಲ್‌ಗಳು ವಾಣಿಜ್ಯ ಮುಕ್ತವಾಗಿರಲಿಲ್ಲ ಮನುಷ್ಯನು ದುಶ್ಚಟಗಳಿಂದ ದೂರವಿದ್ದನು. ಕಾಯಿಲೆಗಳಿಗೆ ಹೆದರುತ್ತಿದನು. ದೇವರಲ್ಲಿ ಭಯ, ಭಕ್ತಿ, ನಂಬಿಕೆ, ಶ್ರದ್ದೆ, ಜೀವನದಲ್ಲಿ ಸಾಮರಸ್ಯ ಹೃದಯ ವೈಶಾಲ್ಯಗಳಿಂದ ಒಗ್ಗಟ್ಟು, ಸಮರ್ಪಣೆ, ತ್ಯಾಗ ಮತ್ತು ಉಪವಾಸದ ಧಾರ್ಮಿಕ ವ್ರತಾಚರಣೆಗಳಿಂದ ಅವನಿಗೆ ಸಂಸ್ಕೃತಿ, ಸಂಸ್ಕಾರಗಳ ನಡೆ ನುಡಿಗಳು ಲಭಿಸುತ್ತಿದ್ದವು.

ಸಾವಯವ ಕೃಷಿ ಮತ್ತು ಸಿರಿ ಧಾನ್ಯಗಳ ಅಭಿಮುಖ ಜಗತ್ತು ಮಾನವನ ದೈಹಿಕ ಪರಿಶ್ರಮ ಮತ್ತು ಸ್ವದೇಶೀ ಕೃಷಿ ಉತ್ಪಾದನೆ, ಬಳಕೆ ಮತ್ತು ಪೂರೈಕೆಗಳಿಗೆ ಸ್ವರಾಜ್ಯದ ಕನಸು ಸಾಕಾರಗೊಳ್ಳುತ್ತಿತ್ತು.

-ಜೆ.ಎಸ್.ಚಂದ್ರನಾಥ, ನೀಲಾನಹಳ್ಳಿ.

## 'ಕನ್ನಡ ಕುವರ-ಕುವರಿ', 'ಕನ್ನಡ ಕೌಸ್ತುಭ', 'ಸರಸ್ವತಿ ಪುರಸ್ಕಾರ' ಪ್ರಶಸ್ತಿಗಳಿಗೆ ಆಹ್ವಾನ

ದಾವಣಗೆರೆ, ಮೇ 12- ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯಿಂದ 2022-23ನೇ ಸಾಲಿನ ಶೈಕ್ಷಣಿಕ ವರ್ಷದ ಎಸ್ಸೆಸ್ಸೆಲ್ಸಿ ಪರೀಕ್ಷೆಯ ಪ್ರಥಮ ಭಾಷೆ ಕನ್ನಡದಲ್ಲಿ ಅತೀ ಹೆಚ್ಚು ಅಂಕ ಪಡೆದ ಮಕ್ಕಳಿಗೆ ದಾವಣಗೆರೆ ಜಿಲ್ಲಾಮಟ್ಟ ಮತ್ತು ರಾಜ್ಯಮಟ್ಟದ ವಿವಿಧ ಪ್ರಶಸ್ತಿಗಳನ್ನು ನೀಡಲಾಗುವುದು ಎಂದು ಸಂಸ್ಥೆಯ ಸಂಸ್ಥಾಪಕ ಸಾಲಿಗ್ರಾಮ ಗಣೇಶ್ ಶೆಣೈ ತಿಳಿಸಿದ್ದಾರೆ.

ಪ್ರಥಮ ಭಾಷೆ ಕನ್ನಡದಲ್ಲಿ 125 ಕ್ಕೆ 120, 121, 122, 123, 124 ಅಂಕ ಪಡೆದ ಮಕ್ಕಳಿಗೆ ದಾವಣಗೆರೆ ಜಿಲ್ಲಾ ಮಟ್ಟದಲ್ಲಿ 'ಕನ್ನಡ ಕುವರ-ಕುವರಿ' ಜಿಲ್ಲಾ ಪ್ರಶಸ್ತಿ, 125 ಕ್ಕೆ 125 ಪರಿಪೂರ್ಣ ಅಂಕ ಪಡೆದ ಮಕ್ಕಳಿಗೆ ರಾಜ್ಯ ಮಟ್ಟದಲ್ಲಿ 'ಕನ್ನಡ ಕೌಸ್ತುಭ' ರಾಜ್ಯ ಪ್ರಶಸ್ತಿ, ಒಟ್ಟು ಅಂಕ 625 ಕ್ಕೆ 600 ಕ್ಕೂ ಹೆಚ್ಚು ಅಂಕ ಪಡೆದ ಮಕ್ಕಳಿಗೆ 'ಸರಸ್ವತಿ ಪುರಸ್ಕಾರ' ರಾಜ್ಯ ಪ್ರಶಸ್ತಿಗಳನ್ನು ವಿತರಿಸಲಾಗು ವುದು ಎಂದು ಸಂಸ್ಥೆಯ ಅಧ್ಯಕ್ಷ ಕೆ.ಹೆಚ್. ಮಂಜುನಾಥ್ ತಿಳಿಸಿದ್ದಾರೆ.

ಕಲಾಕುಂಚ ಸಾಂಸ್ಕೃತಿಕ ಸಂಸ್ಥೆ, # 588, 'ಕನ್ನಡ ಕೃಪಾ', ಕುವೆಂಪು ರಸ್ತೆ, ಕಸ್ತೂರ್ಬಾ ಬಡಾವಣೆ, ದಾವಣಗೆರೆ - 577002. ಮೊಬೈಲ್ ಸಂಖ್ಯೆ : 9538732777, 9743897578, 9844691391 ಕ್ಕೆ ಸಂಪರ್ಕಿಸಬಹುದು ಎಂದು ಕಲಾಕುಂಚ ಮಹಿಳಾ ವಿಭಾಗದ ಅಧ್ಯಕ್ಷರಾದ ಹೇಮಾ ಶಾಂತಪ್ಪ ಪೂಜಾರಿ ತಿಳಿಸಿದ್ದಾರೆ.

## ಸಿಬಿಎಸ್‌ಇ : ಶ್ರೀ ತರಳಬಾಳು ಸೆಂಟ್ರಲ್ ಸ್ಕೂಲ್‌ಗೆ ಶೇ. 100

ದಾವಣಗೆರೆ, ಮೇ 12- 2022-23ರಲ್ಲಿ ನಡೆದ ರಾಷ್ಟ್ರಮಟ್ಟದ ಹತ್ತನೇ ತರಗತಿಯ ಸಿ.ಬಿ.ಎಸ್.ಇ ಪರೀಕ್ಷೆಯಲ್ಲಿ ಶ್ರೀ ತರಳಬಾಳು ಸೆಂಟ್ರಲ್ ಸ್ಕೂಲ್‌ಗೆ ಶೇ. 100ರಷ್ಟು ಫಲಿತಾಂಶ ಲಭಿಸಿದೆ.

ಕು. ಅದ್ವಿತಿ ಎ. ಇವರು ಶೇ. 97 ಅಂಕಗಳನ್ನು ಪಡೆದು ಶಾಲೆಗೆ ಮೊದಲಿಗರಾಗಿರುವುದು ಹೆಮ್ಮೆಯ ಸಂಗತಿ. ಪರೀಕ್ಷೆಗೆ ಹಾಜರಾದ 191 ವಿದ್ಯಾರ್ಥಿಗಳಲ್ಲಿ 94 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್, 78 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ, 19 ವಿದ್ಯಾರ್ಥಿಗಳು ದ್ವಿತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.

ಶಾಲೆಗೆ ಉತ್ತಮ ಫಲಿತಾಂಶವನ್ನು ದೊರಕಿಸಿಕೊಟ್ಟ ವಿದ್ಯಾರ್ಥಿಗಳನ್ನು ಶ್ರೀ ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ಮತ್ತು ಶ್ರೀ ಶಿವಪ್ರಕಾಶ ಶಿವಾಚಾರ್ಯ ಸ್ವಾಮೀಜಿ, ಪ್ರಾಂಶುಪಾಲ ಕೆ. ಸೋಮಶೇಖರಪ್ಪ ಅಭಿನಂದಿಸಿದ್ದಾರೆ.

## ನಗರದಲ್ಲಿ ಇಂದು ಬೇಸಿಗೆ ಶಿಬಿರ ಸಮಾರೋಪ

ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಡಿ.ಸಿ.ಎಂ.ಶಾಖೆ ಹಾಗೂ ಡಿ.ಸಿ.ಎಂ. ಟೌನ್‌ಶಿಪ್‌ನಲ್ಲಿರುವ ಗೋಲ್ಡನ್ ಪಬ್ಲಿಕ್ ಸ್ಕೂಲ್ ಸಂಯುಕ್ತಾಶ್ರಯದಲ್ಲಿ ಮೇ 1 ರಂದು ಪ್ರಾರಂಭವಾದ 'ಚಿಣ್ಣರ ಚಿಲಿಪಿಲಿ' ಮಕ್ಕಳ ಬೇಸಿಗೆ ಶಿಬಿರ ಇಂದು ಸಂಜೆ 5 ಗಂಟೆಗೆ ಗೋಲ್ಡನ್ ಪಬ್ಲಿಕ್ ಶಾಲೆಯ ಸಭಾಂಗಣದಲ್ಲಿ ಸಮಾರೋಪ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ಸಂಸ್ಥೆಯ ಮುಖ್ಯಸ್ಥರಾದ ಶ್ರೀಮತಿ ಕುಸುಮಾ ಶಿವಕುಮಾರ್ ತಿಳಿಸಿದ್ದಾರೆ.

ಸಮಾರಂಭದ ಅಧ್ಯಕ್ಷತೆಯನ್ನು ಗೋಲ್ಡನ್ ಪಬ್ಲಿಕ್ ಸ್ಕೂಲ್‌ನ ಸಂಸ್ಥಾಪಕ ಕೆ.ಎಂ. ಶಿವಕುಮಾರ್ ವಹಿಸಿಕೊಳ್ಳಲಿದ್ದು, ಕಲಾಕುಂಚ ಸಂಸ್ಥೆಯ ಸಂಸ್ಥಾಪಕ ಸಾಲಿಗ್ರಾಮ ಗಣೇಶ್ ಶೆಣೈ ಗೌರವ ಉಪಸ್ಥಿತರಿದ್ದು, ಮುಖ್ಯ ಅತಿಥಿಗಳಾಗಿ ಹಿರಿಯ ಚಿತ್ರ ಕಲಾವಿದ ಚಂದ್ರಶೇಖರ್ ಎಸ್. ಸಂಗಾ, ಕಲಾಕುಂಚ ಡಿಸಿಎಂ ಶಾಖೆ ಅಧ್ಯಕ್ಷರಾದ ಶ್ರೀಮತಿ ಶಾರದಮ್ಮ ಶಿವನಪ್ಪ, ಹಿರಿಯ ಯೋಗಪಟು ಡಿ.ಹೆಚ್.ಚನ್ನಬಸಪ್ಪ, ಡಿಸಿಎಂ ಟೌನ್‌ಶಿಪ್‌ನ ನಾಗರಿಕ ಸಮಿತಿಯ ಅಧ್ಯಕ್ಷ ಕೆ. ಹಾಲಪ್ಪ, ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದು ಬೇಸಿಗೆ ಶಿಬಿರದ ಸಂಚಾಲಕ ಎಂ.ಎನ್. ಮೃತ್ಯುಂಜಯ ತಿಳಿಸಿದ್ದಾರೆ.

## ವಿಶ್ವಚೇತನ ವಿದ್ಯಾನಿಕೇತನ ಸಿಬಿಎಸ್‌ಸಿ ಆಂಗ್ಲ ಮಾಧ್ಯಮ ಪ್ರೌಢಶಾಲೆಗೆ ಶೇ.99



ದಾವಣಗೆರೆ, ಮೇ 12- ನಗರದ ವಿಶ್ವಚೇತನ ವಿದ್ಯಾನಿಕೇತನ ವಸತಿಯುತ ಸಿ.ಬಿ.ಎಸ್.ಸಿ ಪ್ರೌಢಶಾಲೆಯಲ್ಲಿ 2022-23ನೇ ಸಾಲಿನ ಪರೀಕ್ಷೆಗೆ ಹಾಜರಾದ ವಿದ್ಯಾರ್ಥಿಗಳಲ್ಲಿ ಕು. ವಿ. ಚಾಣಕ್ಯ, ಈಶ್ವರ್ ಎಸ್.ಎನ್. ಶೇ. 97 ಅಂಕಗಳನ್ನು ಪಡೆದಿರುತ್ತಾರೆ.

ಶೇ.60 ರಷ್ಟು ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ ಮತ್ತು ಶೇ. 89 ರಷ್ಟು ವಿದ್ಯಾರ್ಥಿಗಳು ಪ್ರಥಮ ಶೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ವಿದ್ಯಾರ್ಥಿಗಳನ್ನು ಶಾಲಾ ಕಾರ್ಯದರ್ಶಿ ಶ್ರೀಮತಿ ವಿಜಯಲಕ್ಷ್ಮಿ ವೀರಮಾಚನೇನಿ ಅಭಿನಂದಿಸಿದ್ದಾರೆ.

## ಮಕ್ಕಳ ಬುದ್ದಿಶಕ್ತಿ ಬೆಳವಣಿಗೆಗೆ ಬೇಸಿಗೆ ಶಿಬಿರಗಳು ಅವಶ್ಯಕ : ಡಾ.ವಿವೇಕ ಬಿಡೆ

ದಾವಣಗೆರೆ,ಮೇ 12- ಬೇಸಿಗೆ ರಜೆಯಲ್ಲಿ ಮಕ್ಕಳು ಸಮಯವನ್ನು ವ್ಯರ್ಥ ಮಾಡದೇ ಇಂತಹ ಕಲೆ, ಸಾಹಿತ್ಯ, ಸಂಸ್ಕೃತಿ, ಸಂಗೀತ, ಕ್ರೀಡೆ, ಯೋಗ ಕಲಿಸುವ ಬೇಸಿಗೆ ಶಿಬಿರಗಳಲ್ಲಿ ಭಾಗವಹಿಸಿರಿ ಎಂದು ಡಾ.ವಿವೇಕ ಬಿಡೆ ಸಲಹೆ ನೀಡಿದರು.

ನಗರದ ಸೆಂಟ್‌ಫಾಲ್ಸ್ ಕಾನ್ವೆಂಟ್ ಶಾಲೆಯಲ್ಲಿ ಈಚೆಗೆ ಏರ್ಪಾಡಾಗಿದ್ದ ಮಕ್ಕಳ ಬೇಸಿಗೆ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮಕ್ಕಳು ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸುವ ಮೂಲಕ ತಮ್ಮ ಬುದ್ದಿಶಕ್ತಿ ಬೆಳೆಸಿಕೊಳ್ಳಿರಿ ಎಂದು ಕರೆ ನೀಡಿದರು. ಶಿಬಿರದ ಸಂಚಾಲಕರಾದ ಜಸ್ಸಿ ಮಾತನಾಡಿದರು. ಶಾಲೆ ವ್ಯವಸ್ಥಾಪಕರಾದ ಸಿಸ್ಟರ್ ಮಾರ್ಜರಿ ಅವರ ನೇತೃತ್ವದಲ್ಲಿ ಬೇಸಿಗೆ ಶಿಬಿರ ನಡೆಯಿತು. ಸಿಸ್ಟರ್ ಅನೀಸ್, ಸಿಸ್ಟರ್ ಸಮಂತ, ಸಿಸ್ಟರ್ ಫ್ರಾನ್ಸಲಿನಾ, ಪ್ರಭಾರ ಮುಖ್ಯೋಪಾಧ್ಯಾಯ ಭಾಗ್ಯನಾಥನ್, ಶಿಕ್ಷಕರಾದ ಶಿಂಸಿ, ಪೂರ್ಣಿಮ, ವಿದ್ಯಾ, ಅನುಷ, ನಯನ, ಸುಷ್ಮಾ, ಗೋವಿಂದಪ್ಪ, ಶಿಬಿರಾರ್ಥಿಗಳು ಹಾಗು ಇತರರು ಇದ್ದರು.



## ಚಂದನ ಎಸ್‌ವಿಎಸ್ ಪ್ರೌಢಶಾಲೆಗೆ ಟಾಪರ್



ದಾವಣಗೆರೆ, ಮೇ 12 - ನಿಟುವಳ್ಳಿ ಹೊಸ ಬಡಾವಣೆಯಲ್ಲಿರುವ ಜಿ.ವಿ. ಚಂದನ ಎಸ್.ಎಸ್.ಎಲ್‌ಸಿ ಪರೀಕ್ಷೆಯಲ್ಲಿ ಶೇ. 98 ರಷ್ಟು ಫಲಿತಾಂಶ ಪಡೆದು ಎಸ್‌ವಿಎಸ್ ಪ್ರೌಢಶಾಲೆಗೆ ಟಾಪರ್ ಆಗಿ ಉತ್ತೀರ್ಣಳಾಗಿದ್ದಾಳೆ. ಜಿ.ವಿ. ಚಂದನ ಕನ್ನಡ ವಿಷಯದಲ್ಲಿ 125 ಕ್ಕೆ 125 ಅಂಕ ಪಡೆದಿದ್ದಾಳೆ. ಚಂದನ, ದಾವಣಗೆರೆ ಗ್ರಾಮದ ಬೋರ್ಡ್ ಸದಸ್ಯ ಜಿ. ನಾಗಪ್ಪ ಅವರ ಮಗ ಜಿ.ಎನ್. ವೀರಭದ್ರಪ್ಪ, ಕವಿತಾ ಅವರ ಪುತ್ರಿ.

## ಇಲಾಖಾ ಪರೀಕ್ಷೆಗಳಿಗೆ ತರಬೇತಿ


ದಾವಣಗೆರೆ, ಮೇ 12- ಜಿಲ್ಲೆಯ ಸರ್ಕಾರಿ ನೌಕರರಿಗೆ ಅಕೌಂಟ್ಸ್ ಲೋಯರ್, ಹೈಯರ್ ಇಲಾಖಾ ಪರೀಕ್ಷೆಗಳಿಗೆ ಹಾಜರಾಗುವ ನೌಕರರಿಗೆ ಇದೇ ದಿನಾಂಕ 15 ರಂದು ಸಂಜೆ 6 ಗಂಟೆಯಿಂದ 7.30 ರವರೆಗೆ ಕೋಚಿಂಗ್ ಶಿಬಿರವನ್ನು ಪ್ರಾರಂಭ ಮಾಡಲಿದ್ದಾರೆ. ಶಿಬಿರವು ಬಿ.ಐ.ಇ.ಟಿ. ಕಾಲೇಜ್ ಬಸ್ ನಿಲ್ದಾಣದ ಎದುರು, 2ನೇ ಮುಖ್ಯರಸ್ತೆ, ಶ್ರೀ ಸ್ವಾಮಿ ವಿವೇಕಾನಂದ ಬಡಾವಣೆಯಲ್ಲಿರುವ ಬ್ರಾಹ್ಮೀ ಅಕಾಡೆಮಿಯಲ್ಲಿ ನಡೆಯುವುದು. ಸಂಪನ್ಮೂಲ ವ್ಯಕ್ತಿಗಳಾಗಿ ನಿವೃತ್ತ ಖಜಾನೆ ಅಧಿಕಾರಿ ಎಂ. ಬಸವರಾಜ್ ಆಗಮಿಸುವರು. ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ: 9845284348, 7975268494.

## ಡಿಪ್ಲೋಮಾ ಟೂಲ್ ಅಂಡ್ ಡೈ ಮೇಕಿಂಗ್ ಕೋರ್ಸ್ ಪ್ರವೇಶಕ್ಕೆ ಅರ್ಜಿ ಆಹ್ವಾನ

ದಾವಣಗೆರೆ, ಮೇ. 12- ಹರಿಹರದ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದಲ್ಲಿ ಎ.ಇ.ಸಿ.ಟಿ.ಇ ಯಿಂದ ಅನುಮೋದನೆಗೊಂಡ 2023-24 ನೇ ಸಾಲಿನ ಡಿಪ್ಲೋಮಾ ಟೂಲ್ ಅಂಡ್ ಡೈ ಮೇಕಿಂಗ್ ಕೋರ್ಸ್ ಗೆ ಎಸ್.ಎಸ್.ಎಲ್.ಸಿ ತೇರ್ಗಡೆಯಾದ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಅರ್ಹ ಮತ್ತು ಆಸಕ್ತ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಅರ್ಜಿ ಸಲ್ಲಿಸಲು ಹಾಗೂ ಹೆಚ್ಚಿನ ಮಾಹಿತಿಗಾಗಿ ಪ್ರಾಂಶುಪಾಲರು, 22- ಸಿ ಮತ್ತು ಡಿ. ಕೆ.ಐ.ಎ.ಡಿ.ಬಿ, ಕೈಗಾರಿಕಾ ಪ್ರದೇಶ ಹರ್ಲಾಪುರ, ಹರಿಹರ- 577601 ಮೊ. ನಂ: 9845941245/ 8711913947ಗೆ ಸಂಪರ್ಕಿಸುವಂತೆ ತಿಳಿಸಲಾಗಿದೆ.

## ದೈವಜ್ಞ ಬ್ರಾಹ್ಮಣ ವಟುಗಳಿಗೆ ಉಪನಯನ



ದಾವಣಗೆರೆ, ಮೇ 12- ಸೋದೆ ವಾದಿರಾಜ ಮಠದಲ್ಲಿ ಶ್ರೀ ವಿಶ್ವ ವಲ್ಲಭ ತೀರ್ಥರ ಉಪಸ್ಥಿತಿಯಲ್ಲಿ ಶ್ರೀಮಠದ ಶಿಷ್ಯರಾದ ದೈವಜ್ಞ ಬ್ರಾಹ್ಮಣ ಸಮಾಜದ ವಟುಗಳಿಗೆ ತಪ್ತ ಮುದ್ರಾಧಾರಣ ಪೂರ್ವಕವಾಗಿ ಉಪನಯನ ನಡೆಯಿತು.

## 'ವಿಶ್ವ ರೆಡ್ ಕ್ರಾಸ್ ದಿನ' : ಹರಿಹರದಲ್ಲಿ ಆರೋಗ್ಯ ಶಿಬಿರ



ದಾವಣಗೆರೆ, ಮೇ 12- ರೆಡ್ ಕ್ರಾಸ್ ಸಂಸ್ಥಾಪಕ ಸರ್ ಜಾನ್ ಹೆನ್ರಿ ಡುನಾಂಟ್ ಇವರ ಜನ್ಮ ದಿನದ ಸ್ಮರಣಾರ್ಥ 'ವಿಶ್ವ ರೆಡ್‌ಕ್ರಾಸ್ ದಿನ'ದ ಅಂಗವಾಗಿ ಹರಿಹರದ ಶ್ರೀಮತಿ ಗಿರಿಯಮ್ಮ ಆರ್. ಕಾಂತಪ್ಪ ಶ್ರೇಷ್ಠಿ ಪ್ರಥಮ ದರ್ಜೆ ಮಹಿಳಾ ಮಹಾವಿದ್ಯಾಲಯದಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ ಹಮ್ಮಿಕೊಳ್ಳಲಾಗಿತ್ತು.

'ಯುವ ವಯಸ್ಕರಲ್ಲಿ ಒತ್ತಡ ಮತ್ತು ಖಿನ್ನತೆ' ವಿಷಯ ಕುರಿತಂತೆ ಜೆ.ಜೆ.ಎಂ ಮೆಡಿಕಲ್ ಕಾಲೇಜು ಸಹಾಯಕ ಪ್ರಾಧ್ಯಾಪಕರಾದ ಡಾ. ಹೆಚ್. ಹೇಮಾವತಿ ಉಪನ್ಯಾಸ ನೀಡಿದರು.

ಯುವ ವಯಸ್ಕರಲ್ಲಿ ಒತ್ತಡ ಮತ್ತು ಖಿನ್ನತೆಯ ಬಗ್ಗೆ ಅದರಲ್ಲೂ ಮುಖ್ಯವಾಗಿ ಮಹಿಳೆಯರಲ್ಲಿ ಆಗುವ ಒತ್ತಡ ಮತ್ತು ಪ್ರಸಕ್ತ ಸಂದರ್ಭದಲ್ಲಿ ವಿದ್ಯಾರ್ಥಿನಿಯರು ಎದುರಿಸುತ್ತಿರುವ ಸವಾಲುಗಳು, ಖಿನ್ನತೆಯನ್ನು ಸಮರ್ಪಕವಾಗಿ ಎದುರಿಸುವ ಬಗ್ಗೆ ಡಾ. ಹೇಮಾವತಿ ತಿಳಿಸಿದರು.

ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಜಿಲ್ಲಾ ಶಾಖೆಯ ಪ್ರಧಾನ ಕಾರ್ಯದರ್ಶಿ ಆನಂದ ಜ್ಯೋತಿ 'ರಕ್ತದಾನದ ಮಹತ್ವ ಹಾಗೂ ಜಾಗೃತಿ' ಉಪನ್ಯಾಸ ನೀಡಿದರು. ನಂತರ ರಕ್ತದಾನ ಶಿಬಿರ ಮತ್ತು ಹಿಮೋಗ್ಲೋಬಿನ್ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿತ್ತು.

ದಾವಣಗೆರೆ ನೇತ್ರಾಲಯ ಹಾಗೂ ಡಾ. ಅಗರ್‌ವಾಲ್ ಕಣ್ಣಿನ ಆಸ್ಪತ್ರೆ ಇವರ ಜಂಟೀ ಸಹಯೋಗದೊಂದಿಗೆ ಉಚಿತ ಕಣ್ಣಿನ ತಪಾಸಣಾ ಶಿಬಿರ ನಡೆಸಲಾಯಿತು.

ಓರೆವಾ ಆರ್ ಎಸ್ - ಶ್ರವಣ ಆರೋಗ್ಯ ಚಿಕಿತ್ಸಾಲಯ, ದಾವಣಗೆರೆ ಇವರಿಂದ ಉಚಿತ ಶ್ರವಣ ಆರೋಗ್ಯ ಶಿಬಿರ ನಡೆಯಿತು.

ಈ ಶಿಬಿರದಲ್ಲಿ ಒಟ್ಟು 54 ಜನ ಶ್ರವಣ ಚಿಕಿತ್ಸೆಯನ್ನು ಹಾಗೂ 72 ಜನ ಕಣ್ಣಿನ ಚಿಕಿತ್ಸೆಯನ್ನು ಪಡೆದು ಕೊಂಡರು. 30ಕ್ಕೂ ಹೆಚ್ಚು ವಿದ್ಯಾರ್ಥಿನಿಯರ ಹಿಮೊಗ್ಲೋ ಬಿನ್ ತಪಾಸಣೆ ನಡೆಸಲಾಯಿತು. ಅರ್ಹ ಇಬ್ಬರು ವಿದ್ಯಾರ್ಥಿನಿಯ ರಿಂದ 2 ಯುನಿಟ್ ರಕ್ತಸಂಗ್ರಹಿಸಲಾಯಿತು.

ಹರಿಹರ ಪೌರ ಸೇವಾ ಸಮಿತಿ ಅಧ್ಯಕ್ಷ ಜಿ.ಎಂ. ತಿಪ್ಪೇಸ್ವಾಮಿ ಕಾರ್ಯಕ್ರಮ ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಪೌರ ಸೇವಾ ಸಮಿತಿ ಕಾರ್ಯದರ್ಶಿ ಹಾಗೂ ವಕೀಲರಾದ ಎಸ್ ಪ್ರಸನ್ನಕುಮಾರ್, ಶ್ರೀಮತಿ ಗಿರಿಯಮ್ಮ ಆರ್.ಕಾಂತಪ್ಪ ಶ್ರೇಷ್ಠಿ ಪ್ರಥಮ ದರ್ಜೆ ಮಹಿಳಾ ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ಜಿ ಬಿ ಗಂಗಾಧರಪ್ಪ ಆಗಮಿಸಿದ್ದರು. ರೆಡ್‌ಕ್ರಾಸ್ ನಿರ್ದೇಶಕರುಗಳಾದ ಶಿವಾನಂದ ಡಿ.ಎನ್, ರವಿಕುಮಾರ್ ಎ.ಜೆ ಮತ್ತಿತರರು ಭಾಗವಹಿಸಿದ್ದರು.

## ಹರಿಹರದಲ್ಲಿ ಹೇಮರೆಡ್ಡಿ ಮಲ್ಲಮ್ಮ ಜಯಂತಿ



ಹರಿಹರ, ಮೇ 12- ಇಲ್ಲಿನ ತಾಲ್ಲೂಕು ಕಚೇರಿಯಲ್ಲಿ ಶಿವಶರಣೆ ಮಹಾಸಾಧ್ವಿ ಹೇಮರೆಡ್ಡಿ ಮಲ್ಲಮ್ಮ ಜಯಂತಿ ಆಚರಿಸಲಾಯಿತು. ತಹಶೀಲ್ದಾರ್ ಪೃಥ್ವಿ ಸಾನಿಕಂ ಅಧ್ಯಕ್ಷತೆ ವಹಿಸಿದ್ದರು.

ಕಾರ್ಯಕ್ರಮದಲ್ಲಿ ರೆಡ್ಡಿ ಸಂಘದ ಹರಿಹರ ತಾಲ್ಲೂಕು ಅಧ್ಯಕ್ಷ ಮಂಜುನಾಥ ರೆಡ್ಡಿ, ಕಾರ್ಯದರ್ಶಿ ಕೊಟ್ರೇಶ ರೆಡ್ಡಿ, ಖಜಾಂಚಿ ಶಿವಪ್ಪ ಭಾನುವಳ್ಳಿ, ಉಪಾಧ್ಯಕ್ಷರಾದ ವಿಷ್ಣುರೆಡ್ಡಿ ಬಿ.ಹೆಚ್, ಹನುಮಂತ ರೆಡ್ಡಿ, ಬಸಪ್ಪ ರೆಡ್ಡಿ, ಮಣಕೂರು ಸಮಾಜದ ಮುಖಂಡರಾದ ಮಂಜಪ್ಪ ಬಿದರಿ, ಕೆ ಸುಧಾಕರ್, ಬಸಪ್ಪ ರೆಡ್ಡಿ ತಾಟಿ, ಹದಡಿ ಯಲ್ಲಪ್ಪ ರೆಡ್ಡಿ, ಮಲ್ಲಿಕಾರ್ಜುನ ಬಾವಿಕಟ್ಟೆ ಮತ್ತು ಗ್ರೇಡ್-2 ಶಶಿಧರಯ್ಯ, ಶಿರಸ್ತೇದಾರ್ ಸುನೀತಾ.ಪಿ, ಆಶೋಕ್, ಸೋಮಣ್ಣ, ಸಂಗೀತಾ, ಸೌಮ್ಯ, ಸಂತೋಷ ಹಾಗೂ ಸಿಬ್ಬಂದಿ ವರ್ಗದವರು ಮತ್ತು ರೆಡ್ಡಿ ಸಮಾಜದ ಮುಖಂಡರು ಉಪಸ್ಥಿತರಿದ್ದರು..

## ಹರಿಹರ: ಮಳಿಗೆಗಳ ಹಂಚಿಕೆಯಲ್ಲಿ ಅನ್ಯಾಯ; ಬಿಎಸ್ಪಿಯಿಂದ ಧರಣಿ-ಎಚ್ಚರಿಕೆ

ಹರಿಹರ, ಮೇ 12- ನಗರದ ಗಾಂಧಿ ಮೈದಾನದಲ್ಲಿರುವ ಯುವಜನ ಸೇವಾ ಕ್ರೀಡಾ ಇಲಾಖೆಗೆ ಸೇರಿದ 42 ಮತ್ತು ನಗರಸಭೆಗೆ ಸೇರಿದ 51 ಮಳಿಗೆಗಳನ್ನು ಬಹಿರಂಗವಾಗಿ ಹರಾಜು ಮಾಡದೆ ಕೇವಲ ಬಂಡವಾಳ ಶಾಹಿಗಳು ಮತ್ತು ಅವರ ಕುಟುಂಬದ ಸದಸ್ಯರ ಹೆಸರಿಗೆ 4-5 ಮಳಿಗೆಗಳನ್ನು ನೀಡಿ ಬಡವರಿಗೆ ಅನ್ಯಾಯ ಮಾಡಲಾಗಿದೆ ಎಂದು ಬಹುಜನ ಸಮಾಜ ಪಕ್ಷ ಆರೋಪಿಸಿದೆ.

ಕರಪತ್ರಗಳನ್ನು ಹಂಚಿಕೆ ಮಾಡಿ ಜನರಿಂದ ಡಿ.ಡಿ. ಪಡೆದು ಹರಾಜನ್ನು ಮಾಡದೇ ಬಡವರಿಗೆ ಅನ್ಯಾಯ ಮಾಡಲಾಗಿದೆ ಎಂದು ಪಕ್ಷದ ಜಿಲ್ಲಾಧ್ಯಕ್ಷ ಡಿ. ಹನುಮಂತಪ್ಪ ದೂರಿದ್ದಾರೆ.

ಅಲ್ಲದೇ ಬೀಡಿ ಕಾಲೋನಿಯ 103 ಮನೆಗಳನ್ನು ಹಂಚಿಕೆ ಮಾಡಿ 10 ವರ್ಷ ಕಳೆದರೂ ಅವರಿಗೆ ಖಾತೆ ಮಾಡಿಕೊಡದೆ ಮೂಲಭೂತ ಸೌಲಭ್ಯಗಳಿಂದ ವಂಚಿಸಲಾಗಿದೆ. ಅದೇ ರೀತಿ ಡಾ. ವೈ ನಾಗಪ್ಪ ಆಶ್ರಯ ಬಡಾವಣೆಯ 92 ಮನೆಗಳ ಖಾತೆ ರಿಜಿಸ್ಟರ್ ಮಾಡದೆ ಸತಾಯಿಸುತ್ತಿದ್ದು, ಈ ಸಂಬಂಧ ಕಳೆದ ವರ್ಷ 70 ದಿವಸಗಳ ಕಾಲ ಧರಣಿಯನ್ನು ನಡೆಸಿದ್ದೇವೆ. ಇನ್ನು 10 ದಿವಸಗಳ ಒಳಗಾಗಿ ಈ ಎಲ್ಲಾ ಪ್ರಕ್ರಿಯೆಗಳು ಮುಗಿಯದೇ ಹೋದರೆ ಇದೇ ದಿನಾಂಕ 25 ರಿಂದ ಮತ್ತೆ ನಿರಂತರ ಧರಣಿ ಪ್ರಾರಂಭಿಸಲಾಗುವುದು ಎಂದು ತಿಳಿಸಿದ್ದಾರೆ.

# ಶಿವಗಂಗೋತ್ರಿ : ಇಂದು ಮತ ಎಣಿಕೆ

## ದಾವಿವಿಯ ಎಣಿಕೆ ಕೇಂದ್ರಗಳಲ್ಲಿ ಸಿದ್ಧತೆ ಪರಿಶೀಲಿಸಿದ ಜಿಲ್ಲಾಧಿಕಾರಿ ಕಾಪಶಿ



ದಾವಣಗೆರೆ, ಮೇ 12- ಜಿಲ್ಲೆಯ 7 ವಿಧಾನಸಭಾ ಕ್ಷೇತ್ರಗಳ ಮತ ಎಣಿಕೆಯು ಇಂದು ಬೆಳಗ್ಗೆ 8 ಗಂಟೆಯಿಂದ ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿಯಲ್ಲಿ ನಡೆಯಲಿದ್ದು, ಅಗತ್ಯ ಸಿದ್ದತೆ ಕೈಗೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಶಿವಾನಂದ ಕಾಪಶಿ ತಿಳಿಸಿದ್ದಾರೆ.

ಶುಕ್ರವಾರ ಮತ ಎಣಿಕೆ ನಡೆಯಲಿರುವ ಶಿವಗಂಗೋತ್ರಿಯಲ್ಲಿ ಎಣಿಕೆ ಕೇಂದ್ರಗಳ ಪರಿಶೀಲನೆ ನಡೆಸಿ ಕೈಗೊಂಡಿರುವ ಸಿದ್ದತೆಗಳ ಬಗ್ಗೆ ಅವರು ಮಾಹಿತಿ ನೀಡಿದರು.

ಶಿವಗಂಗೋತ್ರಿಯ ನಾಲೆಜ್ ಬ್ಲಾಕ್‌ನ ಮೊದಲ ಮಹಡಿಯಲ್ಲಿ ಜಗಳೂರು, ದಾವಣಗೆರೆ ಉತ್ತರ, ಮಾಯಕೊಂಡ ಕ್ಷೇತ್ರಗಳ ಮತ ಎಣಿಕೆ ನಡೆಯಲಿದೆ. ಸೈನ್ಸ್ ಬ್ಲಾಕ್ ಮೊದಲ ಮಹಡಿಯಲ್ಲಿ ಹರಿಹರ, ದಾವಣಗೆರೆ ದಕ್ಷಿಣ, ಸೋಷಿಯಲ್ ಸೈನ್ಸ್ ಬ್ಲಾಕ್ ಮೊದಲ ಮಹಡಿಯಲ್ಲಿ ಚನ್ನಗಿರಿ ಹಾಗೂ ಹೊನ್ನಾಳಿ ಕ್ಷೇತ್ರಗಳ ಮತ ಎಣಿಕೆ ನಡೆಯಲಿದೆ.

**14 ಟೇಬಲ್‌ಗಳಲ್ಲಿ ಎಣಿಕೆ:** ಪ್ರತಿ ಕ್ಷೇತ್ರದಲ್ಲಿ 14 ಎಣಿಕೆ ಟೇಬಲ್‌ಗಳ ಮೂಲಕ ಎಣಿಕೆ ನಡೆಯಲಿದೆ ಮೈಕ್ರೋ ಅಬ್ಸರ್‌ವರ್, ಎಣಿಕೆ ಮೇಲ್ವಿಚಾರಕ, ಎಣಿಕೆ ಸಹಾಯಕರು ಇರಲಿದ್ದಾರೆ.

ಬೆಳಗ್ಗೆ 8 ಗಂಟೆಗೆ ಬ್ಯಾಲೆಟ್ ಎಣಿಕೆ ನಡೆಯಲಿದೆ. 8.30 ಕ್ಕೆ ವಿದ್ಯುನ್ಮಾನ ಮತ ಯಂತ್ರಗಳ ಮತ ಎಣಿಕೆ ಕಾರ್ಯ ಆರಂಭವಾಗಲಿದೆ. 7 ಕ್ಷೇತ್ರಗಳಿಂದ 98 ಟೇಬಲ್‌ಗಳಲ್ಲಿ ಎಣಿಕೆ ನಡೆಯಲಿದ್ದು, 196 ಎಣಿಕೆ ಸಿಬ್ಬಂದಿ, 105 ಮೈಕ್ರೋ ಅಬ್ಸರ್‌ವರ್‌ಗಳು ಕಾರ್ಯ ನಿರ್ವಹಿಸಲಿದ್ದಾರೆ.

ಅಂಚೆ ಮತ ಎಣಿಕೆಗೆ 24 ಟೇಬಲ್‌ಗಳಿಗೆ 72 ಸಿಬ್ಬಂದಿ, 24 ಮೈಕ್ರೋ ಅಬ್ಸರ್‌ವರ್, ಸೇವಾ ಮತ ದಾರರ ಮತ ಎಣಿಕೆಗೆ ಪ್ರತಿ ಕ್ಷೇತ್ರಕ್ಕೆ ಒಂದು ಟೇಬಲ್ ಇರಲಿದ್ದು ಒಟ್ಟು 28 ಸಿಬ್ಬಂದಿಯನ್ನು ಹೆಚ್ಚುವರಿಯಾಗಿ ಎಣಿಕೆಗೆ ಮೀಸಲಿರಿಸಲಾಗಿದೆ ಎಂದು ಹೇಳಿದರು.

**19 ರೌಂಡ್ಸ್ ವರೆಗೆ ಎಣಿಕೆ:** ಮತ ಎಣಿಕೆಯು ಕನಿಷ್ಠ 15 ರಿಂದ ಗರಿಷ್ಠ 19 ಸುತ್ತಿನವರೆಗೆ ನಡೆಯಲಿದೆ. ಇದರಲ್ಲಿ ಜಗಳೂರು 262 ಮತಗಟ್ಟೆಗಳು 19 ಸುತ್ತು, ಹರಿಹರ 228 ಮತಗಟ್ಟೆಗಳಿದ್ದು 16 ಸುತ್ತುಗಳು, ದಾವಣಗೆರೆ ಉತ್ತರ 242 ಮತಗಟ್ಟೆ 17 ಸುತ್ತು, ದಾವಣಗೆರೆ ದಕ್ಷಿಣ 214 ಮತಗಟ್ಟೆ 15 ಸುತ್ತು, ಮಾಯಕೊಂಡ 240 ಮತಗಟ್ಟೆ 17 ಸುತ್ತು, ಚನ್ನಗಿರಿ 254 ಮತಗಟ್ಟೆ 18 ಸುತ್ತು, ಹೊನ್ನಾಳಿ 245 ಮತಗಟ್ಟೆಗಳಿಗೆ 18 ಸುತ್ತುಗಳಲ್ಲಿ ಮತ ಎಣಿಕೆ ನಡೆಯಲಿದ್ದು ಮಧ್ಯಾಹ್ನದ ವೇಳೆಗೆ ಸಂಪೂರ್ಣ ಫಲಿತಾಂಶ ಹೊರಬೀಳುವ ನಿರೀಕ್ಷೆ ಇದೆ ಎಂದರು.

**ಅಂಚೆ ಮತಪತ್ರದ ವಿವರ:** ಅಂಚೆ ಮತಪತ್ರದಲ್ಲಿ ಮತದಾನ ಮಾಡಿದವರಲ್ಲಿ 80 ವರ್ಷ ಮೇಲ್ಪಟ್ಟವರು 1784, ವಿಶೇಷಚೇತನರು 495, ಅಗತ್ಯ ಸೇವೆಯಲ್ಲಿರುವವರು 268, ಸೇವಾ ಮತದಾರರು 467 ರಲ್ಲಿ ಮೇ 11 ರ ವರೆಗೆ 31 ಮತ್ತು 10751 ಚುನಾವಣಾ ಸಿಬ್ಬಂದಿಗಳಲ್ಲಿ 7050 ಮತ ಚಲಾಯಿಸಿದ್ದಾರೆ.

### ಎಣಿಕೆ ಕೇಂದ್ರದ ಬಳಿ ಬಿಗಿ ಪೊಲೀಸ್ ಬಂದೋಬಸ್ತ್

ಮತ ಎಣಿಕೆ ನಡೆಯುವ ಶಿವಗಂಗೋತ್ರಿಯಲ್ಲಿ ಮೂರು ಹಂತದಲ್ಲಿ ಭದ್ರತೆಯನ್ನು ಒದಗಿಸಲಾಗಿದೆ. ಮತ ಎಣಿಕೆ ಕೇಂದ್ರದ ಇವಿಎಂ ಭದ್ರತಾ ಕೊಠಡಿ, ಎಣಿಕೆ ಕೊಠಡಿ ಪ್ರವೇಶದ್ವಾರಗಳಲ್ಲಿ ಅರೆಸೇನಾ ಪಡೆಯನ್ನು ನಿಯೋಜಿಸಲಾಗಿದೆ. ಆವರಣದಲ್ಲಿ ಕೆಎಸ್‌ಆರ್‌ಪಿ ಹಾಗೂ ಹೊರಗಡೆ ಸಿವಿಲ್ ಪೊಲೀಸ್ ಸಿಬ್ಬಂದಿಯನ್ನು ನೇಮಕ ಮಾಡಿದ್ದು 300 ಕ್ಕಂತ ಹೆಚ್ಚಿನ ಸಿಬ್ಬಂದಿಗಳಿಂದ ಬಂದೋಬಸ್ತ್ ವ್ಯವಸ್ಥೆ ಕೈಗೊಳ್ಳಲಾಗಿದೆ.

ದಾವಣಗೆರೆ ಸಂತೇಬೆನ್ನೂರು, ಚನ್ನಗಿರಿ ಮಾರ್ಗದಲ್ಲಿ ಸಾಗುವವರು ತೋಳಹುಣಸೆ ವಿಶ್ವವಿದ್ಯಾನಿಲಯದ ಮುಂದಿನ ಮಾರ್ಗದಲ್ಲಿ ಸಂಚಾರಕ್ಕೆ ನಿರ್ಬಂಧ ಇರುವುದರಿಂದ ಬದಲಿ ಮಾರ್ಗದಲ್ಲಿ ತೆರಳಲು ಸೂಚನಾ ಫಲಕಗಳನ್ನು ಅಳವಡಿಸಲಾಗಿದೆ.

ಈಗಾಗಲೇ ಜಿಲ್ಲಾ ದಂಡಾಧಿಕಾರಿಗಳು 144 ಸೆಕ್ಷನ್ ಜಾರಿಗೊಳಿಸಿ ನಿಷೇಧಾಜ್ಞೆ ಜಾರಿ ಗೊಳಿಸಲಾಗಿದ್ದು, ಜಿಲ್ಲೆಯ ಎಲ್ಲಾ ಕಡೆ ನಿಗಾ ವಹಿಸಿದ್ದು, ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಕ್ರಮ ವಹಿಸಲಾಗಿದೆ. ಚುನಾವಣಾ ಫಲಿತಾಂಶಗಳ ಪ್ರತಿ ಸುತ್ತಿನ ಮಾಹಿತಿ ನೀಡಲು ಧ್ವನಿವರ್ಧಕದ ಮೂಲಕ ಎಣಿಕೆ ಮಾಹಿತಿ ಆಗಿಂದಾಗ್ಗೆ ನೀಡಲಾಗುತ್ತದೆ ಎಂದು ಜಿಲ್ಲಾ ರಕ್ಷಣಾಧಿಕಾರಿ ಡಾ.ಅರುಣ್.ಕೆ ವಿವರಿಸಿದರು.

## ಚಿಲ್ಲರೆ ಹಣದುಬ್ಬರ ಶೇ.4.7ಕ್ಕೆ ಇಳಿಕೆ

ನವದೆಹಲಿ, ಮೇ 12 – ಕಳೆದ ಏಪ್ರಿಲ್ ತಿಂಗಳಲ್ಲಿ ಚಿಲ್ಲರೆ ಹಣದುಬ್ಬರ 18 ತಿಂಗಳಲ್ಲೇ ಅತಿ ಕಡಿಮೆ ಶೇ.4.7ಕ್ಕೆ ಇಳಿಕೆಯಾಗಿದೆ. ತರಕಾರಿ, ತೈಲ ಮತ್ತಿತರೆ ವಸ್ತುಗಳ ಬೆಲೆ ಇಳಿಕೆ ಇದಕ್ಕೆ ಕಾರಣವಾಗಿದೆ. ಸತತ ಎರಡನೇ ತಿಂಗಳು ಗ್ರಾಹಕರ ಬೆಲೆ ಸೂಚ್ಯಂಕ ರಿಸರ್ವ್ ಬ್ಯಾಂಕ್‌ನ ಅಪೇಕ್ಷಿತ ಶೇ.6ರ ದರಕ್ಕಿಂತ ಕಡಿಮೆ ಇದೆ. ಮಾರ್ಚ್ 2023ರಲ್ಲಿ ಚಿಲ್ಲರೆ ಹಣದುಬ್ಬರ ದರ ಶೇ.5.66ರಷ್ಟಿತ್ತು. ಕಳೆದ ವರ್ಷ ಏಪ್ರಿಲ್ ತಿಂಗಳಲ್ಲಿ ಶೇ.7.79ರಷ್ಟಿತ್ತು.

## 2024 ಫೆ.15ರಿಂದ ಸಿಬಿಎಸ್‌ಇ ಪರೀಕ್ಷೆ

ನವದೆಹಲಿ, ಮೇ 12 - ಮುಂದಿನ ವರ್ಷ ಫೆಬ್ರವರಿ 15ರಿಂದ ಹತ್ತು ಹಾಗೂ 12ನೇ ತರಗತಿಯ ಮಂಡಳಿ ಪರೀಕ್ಷೆ ನಡೆಸುವುದಾಗಿ ಸಿ.ಬಿ.ಎಸ್.ಇ. ತಿಳಿಸಿದೆ.

ಶೈಕ್ಷಣಿಕ ವರ್ಷಕ್ಕೆ ಅನುಕೂಲ ಮಾಡಲು ಹಾಗೂ ವಿದ್ಯಾರ್ಥಿಗಳು ಪ್ರವೇಶ ಪರೀಕ್ಷೆಗೆ ಸಿದ್ಧವಾಗಲು ನೆರವಾಗುವ ಸಲುವಾಗಿ ಈ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಮಂಡಳಿ ಹೇಳಿದೆ.


ವಿದ್ಯಾನಿಕೇತನ ಅಂಗ್ಲ ಮಾಧ್ಯಮ ಪ್ರೌಢಶಾಲೆ
VIDYANIKETHANA ENGLISH MEDIUM HIGH SCHOOL
(ಜಯನಗರ ಎ ಬ್ಲಾಕ್, ದಾವಣಗೆರೆ ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದಿದೆ)
SSLC RESULT - 2022-23
100% RESULT
Congratulation For All The Students
AMITH S.A 82.24%
SRINIVAS N.K. 76.80%
SANJANA K.R. 71.36%
PUSHPA BAI O. 70.08%
NAGASHREE N.T. 65.23%
SUSHMITHA G.M. 60.16%
RAKESH P 60.00%
CHETHAN A.H. 58.08%
SANJU H. 54.72%
ADMISSION OPEN 2023-24
LIMITED SEATS
PLAY GROUP TO 10TH STD
ಸಂಪರ್ಕಿಸಿ: 94812 17727, 90357 53259, 94833 21616. Email: hmvidyanikethanapublicschool@gmail.com



ಹೃದಯಪೂರ್ವಕ ಅಭಿನಂದನೆಗಳು


ದಿ|| ಶ್ರೀ ಎಂ. ಷಡಕಪ್ಪ, ನಿವೃತ್ತ ಶಿಕ್ಷಕರು ಮತ್ತು
ದಿ|| ಶ್ರೀಮತಿ ಗೌರಮ್ಮ ಮೆಳ್ಳೆಕಟ್ಟೆ ಇವರ ಮೊಮ್ಮಗಳು,
ಶ್ರೀಮತಿ ಎಸ್.ಪಿ. ಸುನೀತ, ಶ್ರೀ ಅಮಿತ್ ಸೊಲಂಕಿ, ಬೆಂಗಳೂರು ಇವರ ಸುಪುತ್ರಿ
ಕು|| ವಿಭ ಎ. ಇವರು
ಬೆಂಗಳೂರಿನ 'ನ್ಯೂ ಹಾರಿಜಾನ್ ಗುರುಕುಲ' ಶಾಲೆಯಲ್ಲಿ ಸಿಬಿಎಸ್‌ಇ
ಹತ್ತನೇ ತರಗತಿ ಪರೀಕ್ಷೆಯಲ್ಲಿ ಶೇ. 96ರಷ್ಟು ಅಂಕ ಪಡೆದು ಉತ್ತೀರ್ಣರಾಗಿದ್ದಾಳೆ.
ಇವಳಿಗೆ ಶುಭ ಹಾರೈಸುತ್ತಾ, ಇವರ ಭವಿಷ್ಯ ಉಜ್ವಲವಾಗಲೆಂದು ಶುಭ ಕೋರುತ್ತೇವೆ.

ಅಜ್ಜ-ಅಜ್ಜಿ : ಶ್ರೀ ಎಸ್. ಜಿ. ಪಂಪಣ್ಣ, ಶ್ರೀಮತಿ ಸಿ.ಎಸ್. ಇಂದಿರಮ್ಮ, ದಾವಣಗೆರೆ.
ಮಾಮ-ಅತ್ತೆ : ಶ್ರೀ ಎಸ್.ಪಿ. ಮಹೇಂದ್ರ, ಶ್ರೀಮತಿ ಆಶಾ ಆರ್. ✦ ಚಿ|| ಎಸ್.ಎಂ. ಪ್ರಜ್ವಲ್
ಅತ್ತೆ : ಕು|| ಹೇಮಲ್ ಸೊಲಂಕಿ, ಬೆಂಗಳೂರು ✦ ಚಿ|| ರೇವಾನ್ಷ್ ಅಮಿತ್
ಶ್ರೀ ಜಿ.ಹೆಚ್. ರಾಮಚಂದ್ರಪ್ಪ, ದೂಡಾ ಮಾಜಿ ಅಧ್ಯಕ್ಷರು, ದಾವಣಗೆರೆ-ಶ್ಯಾಬನೂರು
ಅಜ್ಜ-ಅಜ್ಜಿ : ಶ್ರೀ ರೇವಣಸಿದ್ದಪ್ಪ ಹೆಚ್.ಎಂ. ಶ್ರೀಮತಿ ಭಾಗ್ಯಮ್ಮ
ಶ್ರೀ ಸಿ.ಎಸ್. ಹನುಮಂತಪ್ಪ, ಶ್ರೀಮತಿ ಬಸಮ್ಮ ಮತ್ತು ಮಕ್ಕಳು
ಶ್ರೀ ಸಿ.ಎಸ್. ಮಲ್ಲಿಕಾರ್ಜುನಪ್ಪ, ಶ್ರೀಮತಿ ಜಿ.ಹೆಚ್. ಗಂಗಮ್ಮ ಮತ್ತು ಮಕ್ಕಳು
ಶ್ರೀ ಸಿ.ಎಸ್. ಚಂದ್ರಶೇಖರಪ್ಪ, ಶ್ರೀಮತಿ ಎಸ್.ಜಿ. ಸರೋಜಮ್ಮ ಮತ್ತು ಮಕ್ಕಳು
ಶ್ರೀಮತಿ ಸಿ.ಎಸ್. ನಿರ್ಮಲ, ಶ್ರೀ ಕೆ.ಜಿ. ಚಂದ್ರಪ್ಪ ಮತ್ತು ಮಕ್ಕಳು
ಶ್ರೀಮತಿ ಎಂ.ಸಿ. ಪದ್ಮ, ಶ್ರೀ ಎಸ್.ಜಿ. ಶಶಿಧರ್ ಮತ್ತು ಮಕ್ಕಳು
ಶ್ರೀಮತಿ ಎಂ. ಜಯಲಕ್ಷ್ಮಿ, ಶ್ರೀ ಎನ್.ಜಿ. ಗಂಗಪ್ಪ ಮತ್ತು ಮಕ್ಕಳು
ಶ್ರೀಮತಿ ಜಿ.ಸಿ. ಸುಮ, ಶ್ರೀ ಪ್ರಶಾಂತ್, ಬೆಂಗಳೂರು ಹಾಗೂ ಹಿತೈಷಿಗಳು



|| ಶ್ರೀ ಉತ್ಸವಾಂಬೆ ಕೃಪೆ ||
ಎಸ್.ಡಿ.ಎಲ್. ಎಜ್ಯುಕೇಷನಲ್ ಟ್ರಸ್ಟ್ (ರಿ.) ಮಲೇಬೆನ್ನೂರು.
ಚಿಟ್ಟಕ್ಕಿ ಇಂಟರ್‌ನ್ಯಾಷನಲ್ ಸ್ಕೂಲ್
ಎಸ್.ಹೆಚ್. ರೋಡ್, ಕುಂಬಳೂರು-577 530, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ.
ನೂತನ ಶಾಲಾ ಕಟ್ಟಡದ ಉದ್ಘಾಟನಾ ಸಮಾರಂಭ

ದಿವ್ಯ ಸಾನ್ನಿಧ್ಯ :
ಶ್ರೀಮದ್ದುಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ
ಶ್ರೀ ತರಳಬಾಳು ಜಗದ್ಗುರು ಪರಮಪೂಜ್ಯ
ಶ್ರೀ ಶ್ರೀ ಶ್ರೀ 1108 ಡಾ|| ಶ್ರೀ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು
ತರಳಬಾಳು ಜಗದ್ಗುರು ಬೃಹನ್ಮಠ, ಸಿರಿಗೆರೆ.
ಅಧ್ಯಕ್ಷತೆ : ಶ್ರೀ ಬಸವರಾಜಪ್ಪ ಎಸ್. ಚಿಟ್ಟಕ್ಕಿ
ಗೌರವಾಧ್ಯಕ್ಷರು,
ಎಸ್.ಡಿ.ಎಲ್. ಎಜ್ಯುಕೇಷನಲ್ ಟ್ರಸ್ಟ್ (ರಿ.) ಮಲೇಬೆನ್ನೂರು.
ಮುಖ್ಯ ಅತಿಥಿಗಳು : ಶ್ರೀ ಡಾ|| ಗುರುರಾಜ ಕರಜಗಿ
ಖ್ಯಾತ ಶಿಕ್ಷಣ ತಜ್ಞರು, ಛೇರ್ಮನ್ ಎ.ಸಿ.ಟಿ. ಬೆಂಗಳೂರು.
ಅತಿಥಿಗಳು :
ಸನ್ಮಾನ್ಯ ಶ್ರೀ ಶಿವಾನಂದ ಕಾಪಶಿ, ಐ.ಎ.ಎಸ್.,
ಜಿಲ್ಲಾಧಿಕಾರಿಗಳು, ದಾವಣಗೆರೆ.
ಸನ್ಮಾನ್ಯ ಡಾ|| ಕೆ. ಅರುಣ್, ಐ.ಪಿ.ಎಸ್.
ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ದಾವಣಗೆರೆ.
ಸನ್ಮಾನ್ಯ ಶ್ರೀ ಹಯವದನ ಉಪಾಧ್ಯಾಯ
ಅಸಿಸ್ಟೆಂಟ್ ಜನರಲ್ ಮ್ಯಾನೇಜರ್, ಕರ್ನಾಟಕ ಬ್ಯಾಂಕ್, ಶಿವಮೊಗ್ಗ.
ಸನ್ಮಾನ್ಯ ಶ್ರೀ ಜಿ.ಆರ್. ತಿಪ್ಪೇಶಪ್ಪ
ಉಪನಿರ್ದೇಶಕರು ಆಡಳಿತ, ಶಾಲಾ ಶಿಕ್ಷಣ ಇಲಾಖೆ, ದಾವಣಗೆರೆ ಜಿಲ್ಲೆ.
ಸನ್ಮಾನ್ಯ ಶ್ರೀ ಎಂ. ಹನುಮಂತಪ್ಪ
ಕ್ಷೇತ್ರ ಶಿಕ್ಷಣಾಧಿಕಾರಿಗಳು, ಶಾಲಾ ಶಿಕ್ಷಣ ಇಲಾಖೆ, ಹರಿಹರ.


ಶ್ರೀಮತಿ ನಾಗಮ್ಮ ಶ್ರೀ ಬಸವರಾಜಪ್ಪ ಎಸ್. ಚಿಟ್ಟಕ್ಕಿ ಹಾಗೂ
ಶ್ರೀಮತಿ ಸುಧಾ ಶ್ರೀ ರಮೇಶ್ ಬಿ. ಚಿಟ್ಟಕ್ಕಿ ಮತ್ತು ಮಕ್ಕಳು, ಮಲೇಬೆನ್ನೂರು.
ಇವರು ಮಾಡುವ ವಿಜ್ಞಾಪನೆಗಳು.
ಆತ್ಮೀಯರೇ, ದಿನಾಂಕ : 14.05.2023ನೇ ಭಾನುವಾರ ಬೆಳಿಗ್ಗೆ 11.00ಕ್ಕೆ
ನಾವು ಹರಿಹರ ತಾಲ್ಲೂಕು ಕುಂಬಳೂರಿನಲ್ಲಿ ನೂತನವಾಗಿ ನಿರ್ಮಿಸಿರುವ
"ಚಿಟ್ಟಕ್ಕಿ ಇಂಟರ್‌ನ್ಯಾಷನಲ್ ಸ್ಕೂಲ್"
ಇದರ ಉದ್ಘಾಟನಾ ಸಮಾರಂಭಕ್ಕೆ ತಾವುಗಳು ಆಗಮಿಸಿ ಶುಭ ಹಾರೈಸಬೇಕೆಂದು ಕೋರುತ್ತೇವೆ.

ಪ್ರವೇಶ ಪ್ರಾರಂಭ 2023-2024
ಪ್ರಿಕೆಜಿ, ಎಲ್.ಕೆ.ಜಿ., ಯು.ಕೆ.ಜಿ.
ಮತ್ತು 1 ರಿಂದ 7ನೇ ತರಗತಿವರೆಗೆ

ಅಧ್ಯಕ್ಷರ ನುಡಿ... ಆತ್ಮೀಯ ಪೋಷಕರೇ, ಆಧುನಿಕ ಪ್ರಪಂಚದಲ್ಲಿ ಶಿಕ್ಷಣ ವೇಗವಾಗಿ ಸಾಗುತ್ತಿದೆ. ನಮ್ಮ ಗ್ರಾಮೀಣ ಮಕ್ಕಳ ಶೈಕ್ಷಣಿಕ ಹಿತದೃಷ್ಟಿಯನ್ನು ಗಮನದಲ್ಲಿರಿಸಿ ಕೊಂಡು, ಮಕ್ಕಳ ಸರ್ವತೋಮುಖ ಶೈಕ್ಷಣಿಕ ಬೆಳವಣಿಗೆಗಾಗಿ ಸಕಲ ಸೌಲಭ್ಯಗಳನ್ನೊಳಗೊಂಡ ಶಿಕ್ಷಣ ನೀಡುವುದು. ನನ್ನ ಬಹುದಿನದ ಕನಸು.
ಈ ನಿಟ್ಟಿನಲ್ಲಿ ಡಾ|| ಗುರುರಾಜ ಕರಜಗಿ ಶಿಕ್ಷಣ ತಜ್ಞರು, ಬೆಂಗಳೂರು ಇವರ ಮಾರ್ಗದರ್ಶನದ ಮುಂದಾಳತ್ವದಲ್ಲಿ ನಾವು ಸುಸಜ್ಜಿತ ಕಟ್ಟಡ ಹಾಗೂ ಶೈಕ್ಷಣಿಕ ಮೂಲಭೂತ ವ್ಯವಸ್ಥೆಗಳಾದ ಕಂಪ್ಯೂಟರ್ ಲ್ಯಾಬ್, ಭಾಷಾ ಶಿಕ್ಷಣ, ಆಧುನಿಕ ಲ್ಯಾಬ್, ಸುಸಜ್ಜಿತ ಗ್ರಂಥಾಲಯ, ಡಿಜಿಟಲ್ ಬೋರ್ಡ್ ಮೂಲಕ ಶಿಕ್ಷಣ ಹಾಗೂ ಅನುಭವಿ ಶಿಕ್ಷಕರನ್ನು ಹೊಂದಿದ್ದೇವೆ. "ಬೆಳೆಯುವ ಪೈರು ಮೊಳಕೆಯಲ್ಲಿಯೇ ನೋಡು" ಎಂಬ ಗಾದೆ ಮಾತಿನಂತೆ ಮಗುವಿಗೆ ಚಿಕ್ಕವಯಸ್ಸಿನಲ್ಲೇಯೇ ಸದೃಢ ಶಿಕ್ಷಣ ಬುನಾದಿಯನ್ನು ನೀಡುವ ವ್ಯವಸ್ಥೆ ಕಲ್ಪಿಸಿದ್ದೇವೆ. ನಿಮ್ಮ ಮಗುವಿನ ಉಜ್ವಲ ಭವಿಷ್ಯಕ್ಕಾಗಿ ನಮ್ಮೊಂದಿಗೆ ಕೈ ಜೋಡಿಸಿ.
ಇಂತಿ ನಿಮ್ಮವ : ರಮೇಶ್ ಬಿ. ಚಿಟ್ಟಕ್ಕಿ

ನಮ್ಮ ಶಾಲೆಯ ವಿಶೇಷತೆಗಳು :
- ಮೂಲಭೂತ ವ್ಯವಸ್ಥೆಗಳನ್ನೊಳಗೊಂಡ ಸುಸಜ್ಜಿತ ಕಟ್ಟಡ
- ವಿಶಾಲವಾದ ಆಟದ ಮೈದಾನ
- ಅನುಭವಿ ಹಾಗೂ ನುರಿತ ಶಿಕ್ಷಕ ವೃಂದ
- ಡಿಜಿಟಲ್‌ನ ಬೋರ್ಡ್ ಮೂಲಕ ಶಿಕ್ಷಣ ವ್ಯವಸ್ಥೆ
- ಆಧುನಿಕ ಕಂಪ್ಯೂಟರ್ ಲ್ಯಾಬ್
- ಸುಸಜ್ಜಿತ ಲ್ಯಾಬೋರೇಟರಿ ಮತ್ತು ಗ್ರಂಥಾಲಯ
- ವಿದ್ಯಾರ್ಥಿಗಳಿಗೆ ಶಾಲಾ ವಾಹನ ಸೌಲಭ್ಯ
- ಪ್ರತಿ ವಿದ್ಯಾರ್ಥಿಗೂ ಪ್ರತ್ಯೇಕ ಗಮನ ಮತ್ತು ಕಾಳಜಿ
- ಭಾಷಾ ಬೆಳವಣಿಗೆಗೆ ವಿಶೇಷ ತರಗತಿಗಳು
- ಕ್ರೀಡಾ ಚಟುವಟಿಕೆಗಳಿಗೆ ಹೆಚ್ಚಿನ ಪ್ರೋತ್ಸಾಹ
- ಯೋಗ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಆದ್ಯತೆ.

ಶುಭ ಕೋರುವವರು :
ಸತೀಶ್ ಇಂಡೇರ್
ಕಟ್ಟಡ ವಿನ್ಯಾಸಕಾರರು
ವೀಣಾ ಸ್ಕ್ವಯರ್,
ರಿಂಗ್ ರೋಡ್, SS ಲೇಔಟ್ ದಾವಣಗೆರೆ.
ಬಿಸಲೇರಿ ಗಂಗಣ್ಣ
ನಂದಿ ಅಸೋಸಿಯೇಟ್ಸ್,
ಇಂಜಿನಿಯರ್, ಕಂಟ್ರ್ಯಾಕ್ಟರ್
#11, 1ನೇ ಮೇನ್, 1ನೇ ಕ್ರಾಸ್,
ಸುಂದರ್ ನಗರ್,
ಗೋಕುಲ್ ಎಕ್ಸ್‌ಟೆನ್ಷನ್, ಬೆಂಗಳೂರು-54.

ಸರ್ವರಿಗೂ ಆದರದ ಸುಸ್ವಾಗತ

ರಮೇಶ್ ಬಿ. ಚಿಟ್ಟಕ್ಕಿ
ಅಧ್ಯಕ್ಷರು
ಎಸ್.ಡಿ.ಎಲ್. ಎಜ್ಯುಕೇಷನ್ ಟ್ರಸ್ಟ್ (ರಿ.) ಮಲೇಬೆನ್ನೂರು.
ಫೋನ್ : 9448492527

ಮಹಾಂತೇಶ್ ಸ್ವಾಮಿ
ಕಾರ್ಯದರ್ಶಿಗಳು
ಎಸ್.ಡಿ.ಎಲ್. ಎಜ್ಯುಕೇಷನ್ ಟ್ರಸ್ಟ್ (ರಿ.) ಮಲೇಬೆನ್ನೂರು.
ಫೋ. : 9916619087

ಎಸ್.ಕೆ. ಕುಮಾರ್
ಆಡಳಿತಾಧಿಕಾರಿಗಳು
ಎಸ್.ಡಿ.ಎಲ್. ಎಜ್ಯುಕೇಷನ್ ಟ್ರಸ್ಟ್ (ರಿ.) ಮಲೇಬೆನ್ನೂರು.
ಫೋ. : 9743995172

ಎಸ್.ಡಿ.ಎಲ್. ಎಜ್ಯುಕೇಷನ್ ಟ್ರಸ್ಟ್ (ರಿ.) ಪ್ರಾಂಶುಪಾಲರು ಹಾಗೂ ಶಾಲಾ ಸಿಬ್ಬಂದಿ ವರ್ಗ, ಶ್ರೀ ಧನಲಕ್ಷ್ಮೀ ಸಮೂಹ ಸಂಸ್ಥೆಗಳು, ಲೆಕ್ಕ ಪರಿಶೋಧಕರು, ಗುಮಾಸ್ತರು, ವಾಹನ ಚಾಲಕರು, ಹಮಾಲರು, ಮಲೇಬೆನ್ನೂರು.


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte